ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 38 ಸೆಪ್ಟೆಂಬರ್ 20, 1981 ಬೆಲೆ : 60 ಪೈಸೆ

ಪಡಿತರ ಪದ್ಧತಿ

ಬೆಲೆಏರಿಕೆಯನ್ನು ತಡೆಹಿಡಿದು, ಜೀವನಾವಶ್ಯಕ ವಸ್ತುಗಳನ್ನು ಜನತೆಗೆ ನ್ಯಾಯಬೆಲೆಯಲ್ಲಿ ಒದಗಿಸುವ ಕಾರ್ಯದಲ್ಲಿ ಕೇರಳ ರಾಜ್ಯದ ಎಡ ಪ್ರಜಾಪ್ರಭುತ್ವರಂಗ ಸರಕಾರವು ಸಾಧಿಸಿರುವ ಯಶಸ್ಸು ಅದ್ಭುತ. ಸ್ಥಾನಬದ್ಧತಾ ಕಾಯ್ದೆ ಅಥವಾ ರಾಷ್ಟ್ರೀಯ ಭದ್ರತಾ ಕಾಯ್ದೆಯಂತಹ ಪ್ರಜಾಪ್ರಭುತ್ವ ವಿರೋಧಿ ಕಾನೂನುಗಳನ್ನು ಉಪಯೋಗಿಸಿ, ವಿಚಾರಣೆ ಇಲ್ಲದೆ ಕೆಲವು ಕಳ್ಳಸಂತೆ ವ್ಯಾಪಾರಿಗಳನ್ನು ಅಥವಾ ದೊಡ್ಡ ವ್ಯಾಪಾರಿಗಳನ್ನು ಬಂಧನದಲ್ಲಿರಿಸಿದ ಮಾತ್ರಕ್ಕೆ ಬೆಲೆಏರಿಕೆಯನ್ನು ತಡೆಗಟ್ಟುವುದು ಸಾಧ್ಯವಿಲ್ಲ; ಬದಲು ಜನತೆಯ ಸಹಕಾರದಿಂದ ವ್ಯಾಪಕವಾಗಿರುವ ಒಂದು ಪ್ರಬಲ ವಿತರಣಾ ವ್ಯವಸ್ಥೆಯ ಮೂಲಕ ಬೆಲೆಏರಿಕೆಯನ್ನು ತಡೆಹಿಡಿಯುವುದೂ ಮತ್ತು ಜನಸಾಮಾನ್ಯರ ಹಣ ವ್ಯಾಪಾರಿಗಳ ಕಿಸೆ ಸೇರುವುದನ್ನು ತಪ್ಪಿಸುವುದೂ ಸಾಧ್ಯ ಇದೆ ಎಂಬುದನ್ನು ಕೇರಳ ರಾಜ್ಯವು ತೋರಿಸಿಕೊಟ್ಟಿದೆ.

ಕೇರಳ ರಾಜ್ಯದಲ್ಲಿ ಒಟ್ಟು ಇರುವ ಒಂದು ಸಹಸ್ರ ಪಂಚಾಯತುಗಳಲ್ಲಿ ಒಟ್ಟು ಹನ್ನೆರಡು ಸಹಸ್ರ ರೇಷನ್ ಅಂಗಡಿಗಳು ಮತ್ತು ವಿತರಣಾ ಕೇಂದ್ರಗಳಿವೆ. ಕಡ್ಡಾಯ ಪಡಿತರ ಪದ್ಧತಿ ಇದ್ದು, ಎಲ್ಲರೂ ಈ

ಸಂಪಾದಕೀಯ

ಮೂಲಕ ನ್ಯಾಯಬೆಲೆಯಲ್ಲಿ ಅಕ್ಕಿ, ಗೋಧಿ, ಎಣ್ಣೆ ಇತ್ಯಾದಿಗಳನ್ನು ನಿಗದಿಯಾದಷ್ಟು ಪಡೆಯಬಹುದು. ಕೇಂದ್ರಸರಕಾರವು ಮಲತಾಯಿ ಧೋರಣೆಯನ್ನನುಸರಿಸಿ, ಒಪ್ಪಿಕೊಂಡಿರುವಷ್ಟು ದವಸಧಾನ್ಯಗಳನ್ನು ಕಳುಹಿಸಿ ಕೊಡುತ್ತಿಲ್ಲವಾದರೂ (ತಿಂಗಳೊಂದರ ಒಂದು ಲಕ್ಷದ ಮೂವತ್ತೈದು ಸಹಸ್ರ ಟನ್ನುಗಳಷ್ಟನ್ನು ಒದಗಿಸುವ ಬದಲು ಅರುವತ್ತರಿಂದ ಎಪ್ಪತ್ತು ಅಥವಾ ಎಂಭತ್ತು ಸಹಸ್ರ ಟನ್ನುಗಳಷ್ಟು ಮಾತ್ರ ಒದಗಿಸಲಾಗುತ್ತಿದೆ) ಮತ್ತು ಕೇರಳ ರಾಜ್ಯದಲ್ಲಿ ಶೇ. 50ರಷ್ಟು ಆಹಾರದ ಕೊರತೆ ಇದ್ದರೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ವಸ್ತುಗಳನ್ನು ಒದಗಿಸುವ ಕೆಲಸ ನಡೆದಿದೆ. ಓಣಂ ಹಬ್ಬದ ಸಂದರ್ಭ ಒಂದು ವಾರ ಕಾಲದ ಒಂದೂವರೆ ಸಹಸ್ರ "ಮಾವೆಲಿ ಅಂಗಡಿ"ಗಳ ಮೂಲಕ ಅಕ್ಕಿ, ಬಟ್ಟೆ, ಎಣ್ಣೆ, ತರಕಾರಿಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸಲಾಗಿದ್ದು, ಜನತೆಗೆ ಒಟ್ಟು ಅರುವತ್ತು ಕೋಟಿ ರೂಪಾಯಿಯಷ್ಟು ಉಳಿತಾಯವಾಗಿದೆ. ವ್ಯಾಪಕ ಮತ್ತು ವ್ಯವಸ್ಥಿತ ವಿತರಣಾ ಪದ್ಧತಿಯಿಂದ ಹಬ್ಬದ ಸಂದರ್ಭ ಬೆಲೆಗಳು ಗಗನಕ್ಕೇರುವುದನ್ನೂ ಪರಿಣಾಮಕಾರಿಯಾಗಿ ತಡೆಹಿಡಿಯಲಾಗಿದೆ. ಕೇಂದ್ರದ ಮಂತ್ರಿ ಮುಹಂತಿ, ಕೇರಳದ ಸಾಧನೆಯನ್ನು ಹೊಗಳಿ ದೇಶದಾದ್ಯಂತ ಅದನ್ನು ಅನುಸರಿಸಬೇಕೆಂದಿದ್ದಾರೆ.

[ಕಡೇ ಪುಟ ನೋಡಿ]

'ಸರ್ವರಿಗೂ ಉದ್ಯೋಗ–ಸರ್ವರಿಗೂ ಶಿಕ್ಷಣ' ಬೇಡಿಕೆಗೆ ಒತ್ತಾಯಿಸಿ

ದೆಹಲಿಯಲ್ಲಿ ಯುವಜನತೆಯ ಬೃಹತ್ ಮೆರವಣಿಗೆ

1981 ಸೆಪ್ಟೆಂಬರ್ 15ರಂದು 'ಎಲ್ಲರಿಗೂ ವಿದ್ಯಾಭ್ಯಾಸ, ಎಲ್ಲರಿಗೂ ಕೆಲಸ'ವೆಂಬ ಬೇಡಿಕೆಯನ್ನಿಟ್ಟು ಭಾರತದ ಮೂಲೆಮೂಲೆಗಳಿಂದ ಇಲ್ಲಿ ಬಂದು ಸೇರಿದ 50 ಸಾವಿರಕ್ಕೂ ಹೆಚ್ಚಿನ ಯುವಜನರು ಒಂದು ಕೋಟಿ ವಿದ್ಯಾರ್ಥಿ–ಯುವಜನತೆ ಸಹಿಮಾಡಿದ ಮನವಿಪತ್ರವನ್ನು ಪ್ರಧಾನಮಂತ್ರಿಗೆ ಸಮರ್ಪಿಸಿದರು.

ಜಾತಿ, ಭಾಷೆ ಹಾಗೂ ಪ್ರತ್ಯೇಕತಾವಾದದ ಹೆಸರಿನಲ್ಲಿ ವಿದ್ಯಾರ್ಥಿ-ಯುವಜನತೆಯನ್ನು ಪ್ರತ್ಯೇಕಿಸುವ ಪ್ರಸ್ತುತ ಈ ಸನ್ನಿವೇಶದಲ್ಲಿ ನಿರೀಕ್ಷೆಯ ಹಾಗೂ ಆತ್ಮವಿಶ್ವಾಸವನ್ನು ಯುವಜನತೆಯಲ್ಲಿ ತುಂಬುವ ಬೃಹತ್ ಮೆರವಣಿಗೆಯಾಗಿತ್ತು ಇದು. ಗಲಭೆಯ ಬಿರುಗಾಳಿಯನ್ನು ಎಬ್ಬಿಸಿದ ಅಸ್ಸಾಂನಿಂದ, ಜಾತೀಯ ಯುದ್ಧ ನಡೆದ ಗುಜರಾತ್‌ನಿಂದ ಹಾಗೂ ಉತ್ತರದ ಜಮ್ಮು ಕಾಶ್ಮೀರ್‌ನಿಂದ ಹಿಡಿದು ದಕ್ಷಿಣದ ಕರ್ನಾಟಕದ ವರೆಗೂ ಇರುವ 19 ರಾಜ್ಯಗಳಿಂದ ಬಂದ ಯುವಜನ–ವಿದ್ಯಾರ್ಥಿಗಳನ್ನು ಈ ರೂಪದಲ್ಲಿ ಒಂದೆಡೆ ಸೇರಿಸಲು ಸಾಧ್ಯವಾದದ್ದೇ ಒಂದು ಮಹತ್ ಕಾರ್ಯ.

ಒಂದು ಕೋಟಿ ಸಹಿಯ ಮನವಿ ಪತ್ರಗಳನ್ನು ಒಂದು ಎತ್ತಿನ ಗಾಡಿಯಲ್ಲಿ ತುಂಬಿ, ಒಂದೇ ಘೋಷಣೆ ಮತ್ತು ದೃಷ್ಟಿಕೋನದಿಂದ ದೆಹಲಿಯ ಕೆಂಪುಕೋಟೆಯ ಹಿಂಭಾಗದಿಂದ ಹೊರಟ ಮೆರವಣಿಗೆ ಮಧ್ಯಾಹ್ನ ಬೋಟ್‌ಕ್ಲಬ್ ಮೈದಾನವನ್ನು ತಲುಪುವಾಗ ಅಲ್ಲಿ ಒಂದು ಪುಟ್ಟ ಭಾರತವನ್ನೇ ಸೃಷ್ಟಿಸಿತು.

ಡಿ.ವೈ.ಎಫ್.ಐ., ಎಸ್.ಎಫ್.ಐ., ಇಂಡಿಯನ್ ಯೂತ್ ಕಾಂಗ್ರೆಸ್ (ಎಸ್.) ಎನ್.ಎಸ್.ಯು.ಐ. (ಯು), ಆಲ್ ಇಂಡಿಯಾ ಯೂತ್‌ಲೀಗ್, ರೆವಲ್ಯೂಶನರಿ ಆರ್ಗನೈಸೇಷನ್ ಯೂತ್ ಫಾರ್ ಡೆಮಾಕ್ರಸಿ ಈ ಮುಂತಾದ ಸಂಘಟನೆಗಳು ಈ ಭಾರಿ ಮೆರವಣಿಗೆಯನ್ನು ವ್ಯವಸ್ಥೆಗೊಳಿಸಿದ್ದವು.

ಡಿ.ವೈ.ಎಫ್.ಐ. ಅಧ್ಯಕ್ಷ ಇ.ಪಿ. ಜಯರಾಜ್, ಕಾರ್ಯದರ್ಶಿ ಹನನ್ ಮುಲ್ಲಾ (ಎಂ.ಪಿ.), ಎಸ್. ಎಫ್. ಐ. ಅಧ್ಯಕ್ಷ ಎಂ. ಎ. ಬೇಬಿ, ಕಾರ್ಯದರ್ಶಿ ನೇಪಾಲ್ ಭಟ್ಟಾಚಾರ್ಯ, ಆಲ್ ಇಂಡಿಯ ಯೂತ್ ಲೀಗಿನ ಅಧ್ಯಕ್ಷ ಚಿತ್ತಮೊಹಂತ ಮುಂತಾದ ಯುವಜನ–ವಿದ್ಯಾರ್ಥಿ ನಾಯಕರ


[ಕಡೇ ಪುಟ ನೋಡಿ]

ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ; ಭೂಸುಧಾರಣೆಯೇ ತಮ್ಮ ಸರ್ಕಾರದ ಸಾಧನೆ : ನಾಯನಾರ್

ಜನತೆಯ ದಿನ ನಿತ್ಯ ಬಳಕೆಯ ವಸ್ತುಗಳಾದ ಅಕ್ಕಿ, ಗೋಧಿ, ಸಕ್ಕರೆ, ಎಣ್ಣೆ, ಸೋಪು ಮುಂತಾದುವುಗಳ ಬೆಲೆ ಏರದಂತೆ ತಡೆದು, ಅವು ಮಾರುಕಟ್ಟೆಗಿಂತ ಶೇ. 25 ಭಾಗ ಕಡಿಮೆ ಬೆಲೆಯಲ್ಲಿ ಕೇರಳದ ಎಲ್ಲ ಜನತೆಗೆ ಸಿಕ್ಕುವಂತೆ ಮಾಡಿರುವುದೇ ತಮ್ಮ ಸರ್ಕಾರದ ದೊಡ್ಡ ಸಾಧನೆ ಎಂದು ಅಲ್ಲಿನ ಮುಖ್ಯಮಂತ್ರಿ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯ ಕಾಂ. ಇ. ಕೆ. ನಾಯನಾರ್ ಅವರು ಹೇಳಿದರು.

ಕಾಂ. ನಾಯನಾರ್ ಅವರು ಕರ್ನಾಟಕ ರಾಜ್ಯಕ್ಕೆ ಸೆ. 12 ರಿಂದ 15 ರವರೆಗೆ ಭೇಟಿ ಕೊಟ್ಟು, ಬೆಂಗಳೂರು ನಗರ, ತುಮಕೂರು ಮತ್ತು ಮೈಸೂರು ನಗರಗಳಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಿ. ಪಿ. ಐ. (ಎಂ) ನ ಪ್ರಸಕ್ತ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್ ಅವರು 1958 ರಲ್ಲಿ ಕೇರಳದ ಮುಖ್ಯಮಂತ್ರಿಗಳಾಗಿದ್ದಾಗ ಇಡೀ ಕೇರಳದಾದ್ಯಂತ 12,000 (ಹನ್ನೆರಡುಸಾವಿರ) ನ್ಯಾಯಬೆಲೆ ಅಂಗಡಿಗಳನ್ನು ವ್ಯವಸ್ಥೆ ಮಾಡಿದ್ದರು. ಆ ನ್ಯಾಯಬೆಲೆ ಅಂಗಡಿಗಳನ್ನು ಈಗಲೂ ಮುಂದುವರಿಸಿಕೊಂಡು ಬಂದು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ



ತಮ್ಮ ಸರ್ಕಾರ ಬಲಪಡಿಸಿಕೊಂಡು ಬರುತ್ತಿರುವುದರಿಂದಲೇ ಕೇರಳದ ಎಲ್ಲ ಜನತೆಗೆ 2-60 ಕ್ಕೆ ಒಂದು ಕೆ.ಜಿ. ಅಕ್ಕಿ, 3-50 ಕ್ಕೆ ಒಂದು ಕೆ.ಜಿ. ಸಕ್ಕರೆ ಕೊಡಲು ಸಾಧ್ಯವಾಗಿದೆ ಎಂದು ನಾಯನಾರ್ ಹೇಳಿದರು.

ತಮ್ಮ ಸರ್ಕಾರದ ಈ ಸಾಧನೆಯನ್ನು ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಮುಹಂತಿಯವರು ಕೊಂಡಾಡಿರುವುದೂ ಅಲ್ಲದೆ ಕೇರಳದ ಮಾದರಿಯನ್ನು ಇಡೀ ದೇಶ ಅನುಸರಿಸಿದರೆ ಬೆಲೆಏರಿಕೆ ತಡೆಗಟ್ಟಬಹುದು ಎಂದೂ ಅಭಿಪ್ರಾಯಪಟ್ಟಿದ್ದಾರೆ ಎಂಬ ಸಂಗತಿಯನ್ನು ಕಾಂ. ನಾಯನಾರ್ ಹೇಳಿದರು.

ಬೆಲೆ ಏರಿಕೆ ತಡೆಗಟ್ಟಲು "ಮೀಸ" "ನಾಸ" ಮುಂತಾದ ಮಸಿಯಂತಹ ಕಾನೂನು ತಂದು ಇಡೀ ದೇಶದಲ್ಲಿ 458 ಜನ ವ್ಯಾಪಾರಿಗಳನ್ನು ಕಾಂಗ್ರೆಸ್ ಸರ್ಕಾರಗಳು ಬಂಧಿಸಿರುವ ಸುದ್ದಿ ಬಂದಿದೆ. ಆದರೆ ಎಲ್ಲೂ ಬೆಲೆಗಳು ಇಳಿದಿರುವ ಅಥವಾ ನಿಯಂತ್ರಣದಲ್ಲಿರುವ ಸುದ್ದಿ ಬಂದಿಲ್ಲ. ಆದರೆ ಕೇರಳದಲ್ಲಿ ಮಾತ್ರ ಬೆಲೆ ಇಳಿದಿರುವ ಮತ್ತು ನಿಯಂತ್ರಣದಲ್ಲಿರುವ ಸತ್ಯವನ್ನು ಕೇಂದ್ರಸರ್ಕಾರದ ಮಂತ್ರಿಗಳೇ ಹೇಳಿರುವುದರತ್ತ ಕರ್ನಾಟಕ ಜನತೆಯ ಗಮನವನ್ನು ಕಾಂ. ನಾಯನಾರ್ ಸೆಳೆದರು.

ಬೆಲೆನಿಯಂತ್ರಣಕ್ಕೆ ಸಾರ್ವಜನಿಕ ವಿತರಣಾ ಪದ್ಧತಿ ಮತ್ತು ದಕ್ಷವಾಗಿ ಕಾರ್ಯನಿರ್ವಹಿಸುವ ಸರ್ಕಾರಗಳು

[ಕಡೇ ಪುಟ ನೋಡಿ]

ಬೇಡಿಕೆಗಳ ಸಲ್ಲಿಕೆ

ಮೈಸೂರು ಪೆಟ್ರೋ ಕೆಮಿಕಲ್ಸ್ ಎಂಪ್ಲಾಯೀಸ್ ಯೂನಿಯನ್ ಪದಾಧಿಕಾರಿಗಳ ಚುನಾವಣೆ ಇತ್ತೀಚೆಗೆ ನಡೆದು ಈ ಕೆಳಕಂಡವರನ್ನು ಅವಿರೋಧವಾಗಿ ಚುನಾಯಿಸಲಾಯಿತು.

ಶ್ರೀ ಹಬೀಬ್ ಅಹಮದ್ ಅಧ್ಯಕ್ಷರು, ಶ್ರೀ ರವೀಂದ್ರಶೆಟ್ಟಿ ಉಪಾಧ್ಯಕ್ಷರು, ಶ್ರೀ ಸೈಯದ್ ಪಾಟೀಲ್ ಉಪಾಧ್ಯಕ್ಷರು, ಶ್ರೀ ಟಿ. ಎನ್. ವಿಷಕಂಠಯ್ಯ ಪ್ರಧಾನಕಾರ್ಯದರ್ಶಿ, ಶ್ರೀ ಎಂ. ಎ. ಸತ್ತಾರ್ ಸಹಕಾರ್ಯದರ್ಶಿ, ಶ್ರೀ ಮಹದೇವ ಸಂಘಟನಾ ಕಾರ್ಯದರ್ಶಿ ಶ್ರೀ ವಸಂತಪ್ಯಾಟಿ ಖಜಾಂಚಿ.

ದಿನಾಂಕ 17-8-81ರಂದು ಕೆಲಸಗಾರರು ಕಪ್ಪುಪಟ್ಟಿ ಧರಿಸಿ ಕಾರ್ಮಿಕ ಮುಷ್ಕರ ನಿಲುಗಡೆ ಕಾಯಿದೆಯ ವಿರುದ್ಧ ಮತಪ್ರದರ್ಶನ ನಡೆಸಿದರು. ಸರ್ಕಾರವು ತನ್ನ ಕರಾಳ ಕಾಯಿದೆಯನ್ನು ವಾಪಸ್ಸು ಪಡೆಯುವಂತೆ ಆಗ್ರಹಪಡಿಸಿತು.

ಸಂಘವು ಈ ಕೆಳಕಂಡ ಬೇಡಿಕೆಗಳನ್ನು ಮೈಸೂರು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್-ರಾಯಚೂರು ಇದರ ಆಡಳಿತ ಮಂಡಳಿಯವರಿಗೆ ಸಲ್ಲಿಸಿರುತ್ತೆ.

1. ಕೆಲಸಗಾರರ ಉಪಯೋಗಕ್ಕೆ ಸೈಕಲ್ಲುಗಳನ್ನು ಕೊಳ್ಳಲು ತಲಾ ರೂ. 600/- (ಆರುನೂರು)ಗಳನ್ನು ಸಾಲವಾಗಿ ಕೊಡಬೇಕೆಂದು.

2. ಈಗ ಕೆಲಸಗಾರರಿಗೆ ಸಿಗುತ್ತಿರುವ ರಜಾ ಸೌಲಭ್ಯವು ಯಾತಕ್ಕೂ ಸಾಲದುದರಿಂದ ಎಲ್ಲಾ ರೀತಿಯ ರಜಾ ಸೌಲಭ್ಯಗಳನ್ನು (ಕ್ಯಾಜುವಲ್, ಮೆಡಿಕಲ್ ಮತ್ತು ಅರ್ನ್ಡ್) ಜಾಸ್ತಿ ಮಾಡಬೇಕೆಂದು.

3. ನಿತ್ಯೋಪಯೋಗಿ ವಸ್ತುಗಳ ಬೆಲೆಯು ಗಗನ ಮಟ್ಟಕ್ಕೆ ಏರುತ್ತಿರುವುದರಿಂದ ಪ್ರತಿಯೊಬ್ಬ ಕೆಲಸಗಾರರಿಗೂ ಸಂಬಳದ ಜೊತೆಗೆ ತಲಾ ಒಂದು ನೂರು ರೂಪಾಯಿ ಮಧ್ಯಂತರ ಪರಿಹಾರ ಕೊಡಬೇಕೆಂದು.

4. 1980-81ರ ಸಾಲಿನಲ್ಲಿ ಕಂಪೆನಿಯ ಉತ್ಪತ್ತಿ ಹೆಚ್ಚಿ ಕಂಪೆನಿಗೆ ಒಂದು ಕೋಟಿಗೂ ಹೆಚ್ಚು ಲಾಭ ಬಂದಿರುವುದರಿಂದ ಎಲ್ಲಾ ಕೆಲಸಗಾರರಿಗೂ ಶೇ. 40ರಷ್ಟು ಎಕ್ಸ್‌ಗ್ರೇಷಿಯಾ ಕೊಡಬೇಕೆಂದು.

5. ಈಗ್ಗೆ 5 ವರ್ಷಗಳಿಂದಲೂ ಕಂಪೆನಿಯ ಕ್ಯಾಂಟೀನಿನಲ್ಲಿ ತಿಂಡಿತಿನಸು ಮತ್ತು ಊಟದ ವ್ಯವಸ್ಥೆ ಬಹಳ ಕೀಳುಮಟ್ಟದ್ದಾಗಿದ್ದು ಬೆಲೆಯೂ ಕೂಡ ಜಾಸ್ತಿಯಾಗಿರುವುದರಿಂದ ತಿಂಡಿ ಮತ್ತು ಊಟದ ಬೆಲೆಯನ್ನು ಇಳಿಸಿ (ಸಬ್ಸಿಡಿ) ಸಹಾಯಧನ ಕೊಡಬೇಕೆಂದು ಬೇಡಿಕೆಗಳನ್ನು ಸಲ್ಲಿಸಿರುತ್ತೆ.

ದಿನಾಂಕ 9-9-81ರಂದು ಸಂಘವು ಮೇಲ್ಕಂಡ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದೂ ಮತ್ತು ಕಂಪೆನಿಯ ಕೆಲವು ಅಧಿಕಾರಿಗಳ ದೌರ್ಜನ್ಯ, ದುರಾಡಳಿತ ಮತ್ತು ಅವ್ಯವಹಾರಗಳ ಬಗ್ಗೆ ಪ್ರತಿಭಟಿಸಿದುದರಿಂದ ಕಂಪೆನಿಯ ಆಡಳಿತವರ್ಗವು ಪೋಲೀಸರನ್ನು ಕರೆಸಿ ಬೆದರಿಕೆಹಾಕಲಾಯಿತು ಅಲ್ಲದೆ ಪ್ರತಿದಿನ ಸುಮಾರು 25 ಜನ ಪೋಲೀಸರಿಗೆ ಸಾವಿರಾರು ರೂಪಾಯಿಗಳಿಗೂ ಮೇಲ್ಪಟ್ಟು ಖರ್ಚುಮಾಡಲಾಗುತ್ತಿದೆ.

●

ಬೆಂಬಲಾರ್ಥ ಸಭೆ

ದಿನಾಂಕ 10-9-81ರಂದು ದಲಿತರ ಹೋರಾಟಕ್ಕೆ ಬೆಂಬಲಾರ್ಥವಾಗಿ ಗಂಗಾವತಿ ತಾಲ್ಲೂಕು ಪ್ರಾಂತ ರೈತ ಸಂಘ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ರಾಯಚೂರು ಜಿಲ್ಲಾ ಪ್ರಾಂತ ರೈತಸಂಘದ ಸಂಚಾಲಕ ಕಾಂ. ಚಂದ್ರಶೇಖರ ಬಾಳಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ರೈತಮುಖಂಡ ಕಾಂ. ಏ. ಎನ್. ಹಳಕಟ್ಟಿ, ಸಿಂಧನೂರು ತಾಲ್ಲೂಕು ರೈತ-ಕಾರ್ಮಿಕ ಸಂಘದ ಮುಖಂಡ ಸಿದ್ದಪ್ಪ ದೇಸಾಯಿ, ಸಿಂಧನೂರು ತಾಲ್ಲೂಕು ಪ್ರಾಂತ ರೈತ ಸಂಘದ ಸಂಚಾಲಕ ಕಾಂ. ಬಿ. ಲಿಂಗಪ್ಪ, ಗಂಗಾವತಿ ತಾಲ್ಲೂಕು ದ. ಸಂ. ಸ. ನ ಮುಖಂಡ ಕಾಂ. ಭಾಗ್ಯವಂತ ಮೊದಲಾದವರು ದಲಿತರ ಹೋರಾಟವನ್ನು ಬೆಂಬಲಿಸಿ ಮಾತನಾಡಿ, ಹೋರಾಟ ತೀವ್ರಗೊಳಿಸಲು ಕರೆ ನೀಡಿದರು.

ಕೊನೆಯಲ್ಲಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ. ಸಿ. ಎಸ್. ಬಾಳಿ ಮಾತನಾಡುತ್ತಾ ಸ್ಥಳೀಯ ಆರ್. ಎಸ್. ಎಸ್. ನವರ ದಲಿತ ವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸಿದರು. ಸ್ಥಳೀಯ ಸಮಸ್ತ ಜನತೆ, ರಾಜಕೀಯ ಪಕ್ಷಗಳನ್ನು ಭೂಮಿಗಾಗಿ ಹೋರಾಟ ನಡೆಸಿರುವ ದಲಿತರನ್ನು ಬೆಂಬಲಿಸಲು ಮನವಿ ಮಾಡಿದರು.

○

ಸಂತಾಪ

6-9-81 ರಂದು ದೊಡ್ಡಬೆಳಮಂಗಲ ಹೋಬಳಿ ರೈತಸಂಘದ ಕಚೇರಿಯಲ್ಲಿ ಕಾಂ. ದೊಡ್ಡಯ್ಯನವರ ಅಧ್ಯಕ್ಷತೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು, ರೈತರು ಮತ್ತು ಹಿತೈಷಿಗಳು ಸಭೆ ಸೇರಿ 5-9-81ರಂದು ನಿಧನರಾದ ಕಾಂ.ಏ. ಬಾಲಸುಬ್ರಮಣ್ಯಂರ ನಿಧನಕ್ಕೆ ಸಂತಾಪ ಸೂಚಿಸಿದರು.

ವಾರ್ಷಿಕ ಮಹಾಸಭೆ

ಉಡುಪಿ ತಾಲೂಕು ಜನರಲ್ ವರ್ಕರ್ಸ್ ಯೂನಿಯನ್‌ನ ವಾರ್ಷಿಕ ಮಹಾಸಭೆಯು ತಾ. 13 ರಂದು ಅಂಬಾಗಿಲಿನಲ್ಲಿ ಕಾಂ. ವಿಠಲಸೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಅಗಲಿದ ನಾಯಕರಾದ ಏ. ಬಾಲಸುಬ್ರಹ್ಮಣ್ಯಂರ ಬಗ್ಗೆ ಮತ್ತು ಭೂಪೇಶ್ ಗುಪ್ತರ, ಮತ್ತಿತರ ಕಾರ್ಮಿಕ ಮುಂದಾಳುಗಳ ಬಗ್ಗೆಯೂ ಶ್ರದ್ಧಾಂಜಲಿ ಅರ್ಪಿಸಿ ಮೌನ ಆಚರಿಸಿತು.

ಕಳೆದ ವರ್ಷದ ವರದಿ ಮತ್ತು ಲೆಕ್ಕಪತ್ರವನ್ನು ಪರಿಶೀಲಿಸಿ ಮಂಜೂರು ಮಾಡಲಾಯಿತು. ಆಮಂತ್ರಿತರಾಗಿ ಬಂದಿದ್ದ ಸಿ. ಐ. ಟಿ. ಯು. ಮುಂದಾಳುಗಳಾದ ಕಾಂ. ಅಬ್ರಹಾಂ ಕರ್ಕಡ, ಅಂಗರ ಪೂಜಾರಿ, ಎನ್. ಸಾಧು ಅಮೀನ್, ಲಕ್ಷ್ಮಣ, ಮುಕುಂದನ್ ಮೊದಲಾದವರು ಮಾತನಾಡಿ ಕಾರ್ಮಿಕರ ಸಂಘಟನೆ ಬೆಳೆಸಲು ಕರೆನೀಡಿ ಶುಭಕೋರಿದರು.

ಮುಂದಿನ ವರ್ಷದ ಕಮಿಟಿಗೆ ಕಾಂ. ಅಬ್ರಹಾಂ ಕರ್ಕಡ (ಅಧ್ಯಕ್ಷ), ವಿಠಲ ಶೆಟ್ಟಿ (ಉಪಾಧ್ಯಕ್ಷ), ಗುರುರಾಜ್ ಸೆಟ್ಟಿಗಾರ್ (ಕಾರ್ಯದರ್ಶಿ), ಸುರೇಶ ಕಾಂಚನ್ ಜತೆಕಾರ್ಯದರ್ಶಿಯಾಗಿರುವ ಮತ್ತು ಸುಬ್ರಾಯನಾಯ್ಕರನ್ನು ಕೋಶಾಧಿಕಾರಿಯಾಗಿರುವ 15 ಮಂದಿಯಿರುವ ಕಮಿಟಿಯನ್ನು ಚುನಾಯಿಸಲಾಯಿತು.

ಕಾರ್ಮಿಕವಿರೋಧಿ ಶಾಸನಗಳನ್ನು ಉಗ್ರವಾಗಿಖಂಡಿಸುವ, ಬೆಲೆಯೇರಿಕೆಯನ್ನು ವಿರೋಧಿಸುವ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಕೊನೆಯಲ್ಲಿ ಕಾರ್ಯದರ್ಶಿ ಗುರುರಾಜ್ ಸೆಟ್ಟಿಗಾರರು ಧನ್ಯವಾದ ಸಲ್ಲಿಸಿದರು. ●

ಮತಪ್ರದರ್ಶನ

ತಾ. 29-8-81 ನೇ ಶನಿವಾರ ಶಿವಮೊಗ್ಗ ನಗರದ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಆಶ್ರಯದಲ್ಲಿ ಬ್ಯಾಂಕ್, ಜೀವವಿಮೆ, ಸಾಮಾನ್ಯವಿಮೆ, ಅಂಚೆ ತಂತಿ ನೌಕರರು, ಕೆ.ಇ.ಬಿ.ಯ ಸೂಪರಿಂಟೆಂಡಿಂಗ್ ಇಂಜಿನಿಯರರ ಕಛೇರಿಯ ಎದುರು ಮತ ಪ್ರದರ್ಶನ ನಡೆಸಿದರು.

ಘೋಷಣೆಗಳ ಮೂಲಕ ಆರು ತಿಂಗಳಿಗೊಮ್ಮೆ ಬಿಲ್ ಕೊಡುವ ಪದ್ಧತಿಯನ್ನು ರದ್ದು ಮಾಡಬೇಕೆಂದೂ, ತಿಂಗಳಿಗೊಮ್ಮೆ ಮೊದಲಿನಂತೆಯೇ ಬಿಲ್ ಕೊಡುವ ಪದ್ಧತಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

500ಕ್ಕೂ ಮಿಕ್ಕಿ ಸಹಿಗಳುಳ್ಳ ಮನವಿಯನ್ನು ನಂತರ ಎಕ್ಸಿಕ್ಯೂಟಿವ್ ಎಂಜಿನಿಯರರಿಗೆ ನೀಡಲಾಯಿತು. ದಿನೇದಿನೇ ಬೆಲೆ ಏರುತ್ತಿರುವ ಈ ಕಾಲದಲ್ಲಿ ದುಡಿಮೆಯ ಒಂದು ಭಾಗವನ್ನು ತೆಗೆದಿರಿಸಿ ಒಮ್ಮೆಯೇ ಕಟ್ಟುವುದು ಅಸಾಧ್ಯವೆಂದೂ, ಸಂಗ್ರಹಿತವಾಗುವ ಮೊತ್ತ ಗಣನೀಯ ಆದುದರಿಂದ, ಮಂಡಲಿಯು ತನ್ನ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಸಾಲ ತೆಗೆದುಕೊಳ್ಳಬೇಕಾಗಬಹುದು ಇಲ್ಲವೇ ಗ್ರಾಹಕರಿಂದ ಹೆಚ್ಚಿನ ಠೇವಣಿ ಕೇಳಬಹುದೆಂದು, ಈ ಪದ್ಧತಿಯಿಂದ ಉದ್ಯೋಗ ಅವಕಾಶ ಹೆಚ್ಚಿಸುವ ಜವಾಬ್ದಾರಿಯುಳ್ಳ ಒಂದು ಸಾರ್ವಜನಿಕ ಸಂಸ್ಥೆ ಅನೇಕರನ್ನು ಬೀದಿಗೆ ತಳ್ಳುವುದೆಂದು, ಹಾಗಾಗಿ ಈ ಕ್ರಮ ಕೈಬಿಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

○

ಸರ್ವಸದಸ್ಯರ ಸಭೆ

11-9-81ರಂದು ಗುಲಬರ್ಗಾ ಜಿಲ್ಲೆ ಶಹಬಾದ್‌ನ ಎ. ಏ. ಬಿ. ವರ್ಕರ್ಸ್ ಯೂನಿಯನ್ನಿನ ಸರ್ವಸದಸ್ಯರ ಸಭೆ ನಡೆಯಿತು.

ಸಭೆಯನ್ನುದ್ದೇಶಿಸಿ ಯೂನಿಯನ್ನಿನ ಅಧ್ಯಕ್ಷ ಕಾಂ. ಮುಹಮ್ಮದ್ ಹಸನ್‌ಖಾನ್ ಮತ್ತು ಸಂಘಟನಾ ಕಾರ್ಯದರ್ಶಿ ಕಾಂ. ದಾಸ್ ಅವರು ಮಾತನಾಡುತ್ತಾ ಸೆಪ್ಟೆಂಬರ್ 6ರಂದು ಬೆಂಗಳೂರಿನಲ್ಲಿ ಎನ್. ಸಿ. ಸಿ.ಯ ಆಶ್ರಯದಲ್ಲಿ ನಡೆದ ಕಲಾಪಗಳ ವಿವರ ನೀಡಿದರು. ಮುಷ್ಕರ ನಿಷೇಧ ಕಾನೂನುಗಳಂತಹ ಕಾರ್ಮಿಕ ವಿರೋಧಿ ಕ್ರಮಗಳ ವಿರುದ್ಧ ತೀವ್ರ ಹೋರಾಟಕ್ಕೆ ಸಿದ್ಧರಾಗಲು ಕರೆ ನೀಡಿದರು.

1980-81ನೇ ಸಾಲಿಗೆ ಶೇ. 20 ರಷ್ಟು ಬೋನಸ್, ಶೇ. 10ರಷ್ಟು ಎಕ್ಸ್‌ಗ್ರೇಸಿಯಾವನ್ನು ಕೊಡುವಂತೆ ಎ. ಏ. ಬಿ. ಆಡಳಿತವರ್ಗವನ್ನು ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

●

6 ಮಿಲಿಯ ಸಮೀಪಿಸುತ್ತಿರುವ ಕಿಸಾನ್‌ಸಭಾದ ಸದಸ್ಯತ್ವ

ಅಖಿಲಭಾರತ ಕಿಸಾನ್‌ಸಭಾ (A I K S)ದ 1980-81ರ ಸಾಲಿನ ಸದಸ್ಯತ್ವದ ಸಂಖ್ಯೆ 57,34,814ಕ್ಕೆ ತಲುಪಿದೆ. ಕಳೆದ ವರ್ಷ ಸದಸ್ಯರ ಸಂಖ್ಯೆ 45,26,243 ಇತ್ತು. ಈ ವರ್ಷ 12,08,571 ಸದಸ್ಯತ್ವ ಹೆಚ್ಚಾಗಿದೆ.

ರಾಜ್ಯವಾರು ಸದಸ್ಯತ್ವದ ಸಂಖ್ಯೆ ಈ ರೀತಿ ಇದೆ.

1.	ಪ.ಬಂಗಾಲ ರಾಜ್ಯ ಕಿಸಾನ್ ಸಭಾ	38,60,544
2.	ಕೇರಳ ರಾಜ್ಯ ಕಿಸಾನ್ ಸಭಾ	4,20,788
3.	ಕೇರಳ ಅಗ್ರಿಕಲ್ಚರ್ ಲೇಬರ್ ಯೂನಿಯನ್	2,36,817
4.	ಆಂಧ್ರಪ್ರದೇಶ ,, ,, ,,	1,99,311
5.	ಆಂಧ್ರಪ್ರದೇಶ ರಾಜ್ಯ ಕಿಸಾನ್ ಸಭಾ	1,50,000
6.	ತಮಿಳುನಾಡು ,, ,,	1,58,406
7.	ಪಂಜಾಬ್ ,, ,,	99,214
8.	ಪಂಜಾಬ್ ದೆಹತಿ ಮಜ್ದೂರ್ ಸಭಾ	55,151
9.	ಬಿಹಾರ್ ರಾಜ್ಯ ಕಿಸಾನ್ ಸಭಾ	1,20,000
10.	ಉತ್ತರಪ್ರದೇಶ ,, ,,	95,199
11.	ಅಸ್ಸಾಂ ,, ,,	83,544
12.	ತ್ರಿಪುರಾ ,, ,,	80,240
13.	ಮಹಾರಾಷ್ಟ್ರ ,, ,,	40,600
14.	ರಾಜಾಸ್ಥಾನ ,, ,,	35,400
15.	ಕರ್ನಾಟಕ ,, ,,	30,000
16.	ಗುಜರಾತ್ ,, ,,	21,800
17.	ಒರಿಸ್ಸಾ ,, ,,	20,000
18.	ಜಮ್ಮು ಮತ್ತು ಕಾಶ್ಮೀರ ,,	12,400
19.	ಮಧ್ಯಪ್ರದೇಶ ,, ,,	9,400
20.	ಹಿಮಾಚಲಪ್ರದೇಶ ,,	6,000
		57,34,814

ಭಾರತ ಪ್ರದಕ್ಷಿಣೆ

ಎನ್ಕೆ

ಅಧಿಕಾರಿಗಳಿಗೆ ಇಂದಿರಾ ಉಪದೇಶ

ತನ್ನ ಅಧಿಕಾರಾವಧಿಯಲ್ಲಿ ಇಂದಿರಾಗಾಂಧಿ ಹೊಸ ಅಲೆಗಳನ್ನೆಬ್ಬಿಸುತ್ತಲೇ ಇದ್ದಾರೆ. ಸ್ವಾತಂತ್ರ್ಯ ಪಡೆದ ನಂತರ ಮೊದಲನೇ ಸಲ 1975ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿ 65 ಕೋಟಿ ಜನತೆಯ ಬಾಯಿಮುಚ್ಚಲು ಪ್ರಯತ್ನಿಸಿದರು. ಅದೇ ಸಮಯದಲ್ಲಿ ತನಗನುಕೂಲವಾದಂಥ ಚರಿತ್ರೆ ಬರೆಸಿ ಭೂಮಿ ಕೆಳಗೆ ಹುಗಿದಿಟ್ಟರು. ರಾಜಮಹಾರಾಜರನ್ನು ಕಿತ್ತೊಗೆದಾದ ಮೇಲೆ ತನ್ನ ಮನೆತನದ ಪರಂಪರೆ ಉಳಿಸಿಕೊಳ್ಳಲು ತನ್ನ ಮಕ್ಕಳಾದ ಸಂಜಯ–ರಾಜೀವರಿಗೆ ರಾಜಕೀಯ ದೀಕ್ಷೆ ಕೊಡಿಸಿ ಮುಂದೆ ತಂದರು. ಈಗಾಗಲೇ ಆಳಿ ಅಳಿದುಹೋದ ಹಾಗೆಯೇ ಈಗ ಆಳುತ್ತಿರುವ ಸರ್ವಾಧಿಕಾರಿಗಳನ್ನು ನಾಚಿಸುವ ರೀತಿಯಲ್ಲಿ ತನ್ನ ಸರ್ವಾಧಿಕಾರವನ್ನು ಉಪಯೋಗಿಸುತ್ತಿದ್ದಾರೆ. ಮೊನ್ನೆ ತಾನೇ ಕೇಂದ್ರ ಸರಕಾರದ ಮೇಲಧಿಕಾರಿಗಳನ್ನು ಮನಬಂದಂತೆ ಬದ್ಲಿ ಮಾಡಿದರು. ಈಗ ಚರಿತ್ರೆಯಲ್ಲೇ ಪ್ರಥಮ ಬಾರಿ ಕೇಂದ್ರ ಸರಕಾರದ ಅಧಿಕಾರಿಗಳ ಸಭೆ ಕರೆದು ದೇಶದ ಮತ್ತು ಜನತೆಯ ಕಲ್ಯಾಣ ಕಾರ್ಯಗಳಿಗೆ ನಿಷ್ಠರಾಗಿರಬೇಕೆಂದು ಬುದ್ಧಿಮಾತುಗಳನ್ನು ಹೇಳಿದರು.

ವಿದೇಶದಲ್ಲಿರುವ ಐವರನ್ನು ಬಿಟ್ಟು ನಾಲ್ವತ್ತೆಂಟು ಕಾರ್ಯದರ್ಶಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ದೇಶ ಎದುರಿಸುತ್ತಿರುವ ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ಬೆದರಿಕೆಗಳನ್ನು ಒತ್ತಿಹೇಳಿ ರಾಜಕೀಯ ಮುಖಂಡರಂತೆಯೇ ಅಧಿಕಾರಿಗಳೂ ಇದರ ಗಂಭೀರತೆಯನ್ನು ಅರಿತು ಕೆಲಸಮಾಡಬೇಕೆಂದು ಹೇಳಿದರು. ತಮ್ಮ ಅಭಿಪ್ರಾಯಗಳನ್ನು ಮಂತ್ರಿಗಳು ಒಪ್ಪುತ್ತಾರೋ ಇಲ್ಲವೋ ಎಂಬ ಭೀತಿಯನ್ನು ಬಿಟ್ಟುಕೊಟ್ಟು ನಿರ್ಭೀತಿಯಿಂದ ತಮ್ಮ ಅಭಿಪ್ರಾಯ ತಿಳಿಸಬೇಕೆಂದೂ, ರಾಜಕೀಯ ಕ್ಷೇತ್ರದಲ್ಲಿ ಒಮ್ಮೆ ನಿರ್ಣಯ ಕೈಗೊಂಡರೆ ಅವನ್ನು ನಿಷ್ಠೆಯಿಂದ ಪಾಲಿಸಬೇಕೆಂದೂ ಹೇಳಿದರು. ಹಾಗೆಯೇ ಕುಡಿತದಲ್ಲಿ ಮಿತಿ ಇರಬೇಕೆಂದೂ, ಒಂದು ಗ್ಲಾಸ್ ಕುಡಿತ ಹೆಚ್ಚಾದರೆ ದೇಶದ ಮರ್ಯಾದೆಗೆ ಕುಂದುಂತರುವ ಅಪಾಯವನ್ನೂ ಒತ್ತಿಹೇಳಿದರು.

ಅಧಿಕಾರಿಗಳ ಮುಂದೆ ಈ ಮಾತುಗಳನ್ನಾಡುವಾಗ ಬಹುತೇಕ ತಮ್ಮ ಸಂಗಾತಿಗಳ ಕಾರ್ಯದಕ್ಷತೆ, ಕಾರ್ಯಕ್ರಮಗಳಲ್ಲಿ ನಿಷ್ಠೆ, ಕುಡಿತದ ಅಮಲೇರುವಿಕೆಯಲ್ಲಿ ಅವರೆಲ್ಲರೂ ಪ್ರದರ್ಶಿಸುತ್ತಿರುವ ಪೈಪೋಟಿಗಳು ಇಂದಿರಾಗಾಂಧಿಯವರ ಕಣ್ಮುಂದೆ ಕುಣಿದಾಡಿರಬೇಕು.

ಪ್ರಧಾನಿಯವರ ಬಿಚ್ಚು ಮನಸ್ಸಿನಿಂದ ಧೈರ್ಯತಂದುಕೊಂಡ ಅಧಿಕಾರಿಗಳು ತಮ್ಮ ಸಂಕಟ ತೋಡಿಕೊಳ್ಳಲು ಹಿಂದೆಗೆಯಲಿಲ್ಲ. ಮಂತ್ರಿಗಳ ಅದಕ್ಷತೆ, ಮಂತ್ರಿ-ಕಾರ್ಯದರ್ಶಿ ಸಂಬಂಧದಲ್ಲಿ ಅಸಮಾನತೆ, ಅಧಿಕಾರಿಗಳು ತಿಳಿಸಿ ಹೇಳಿದರೂ, ತಿಳಿದುಕೊಳ್ಳದಷ್ಟು ಮೂರ್ಖ ಮಂತ್ರಿಗಳ ಸಮಸ್ಯೆಗಳೂ ಚರ್ಚೆಯ ವಿಷಯವಾದವು. ಮಂತ್ರಿಗಳ ಕಿವಿ ಹಿಂಡಿ ಕಿವಿಮಾತು ಹೇಳಲಾಗುವುದೆಂದೂ, ಕೇಳುವ ಪ್ರವೃತ್ತಿಯನ್ನೇ ಬಿಟ್ಟುಕೊಟ್ಟವರನ್ನು "ಸರಿಯಾದ ಸ್ಥಾನ"ದಲ್ಲಿಡುವ ವ್ಯವಸ್ಥೆ ಮಾಡಲಾಗುವುದೆಂದೂ ಅಮ್ಮಾವ್ರು ಹೇಳಿದರಂತೆ. ಆದರೆ ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗಬಹುದು? ತನ್ನ ಪಾರ್ಟಿಯೊಳಗಿನ ಗುಂಪುಗಾರಿಕೆ ಇಂದಿರಾಗಾಂಧಿಯವರ ತಲೆತಿನ್ನುತ್ತಿದೆಂಬ ಸುದ್ದಿ ಇದೇ ಸಮಯದಲ್ಲಿ ಪ್ರಕಟವಾಗಿದೆ. ಯಾವ ಮಂತ್ರಿಗೆ ಕೈ ಹಚ್ಚಿದರೆ ಯಾವ ಗುಂಪು ದಂಗೆ ಏಳುತ್ತದೆಂದು ಹೇಳುವುದು ಕಷ್ಟ. ದಂಗೆ ನಡೆದು ಇಂದಿರಾ ಬೆಂಬಲಿಗರು ಕೈಕೈಹಿಡಿದು ಬಡಿದಾಡುತ್ತಿರುವುದು ದಿನಾಲೂ ನೋಡಲು ಸಿಗುವ ದೃಶ್ಯ. ಇಂಥ ಪರಿಸ್ಥಿತಿಯಲ್ಲಿ ಅಧಿಕಾರಿಗಳ ತಕರಾರು ಪರಿಹರಿಸುವ ಬಗೆ ಏನು? ಕಾದು ನೋಡೋಣ.

ತಂತಮ್ಮ ಕೆಲಸಕ್ಕನುಸರಿಸಿ ತಮಗೆ ಪ್ರಶಸ್ತಿ ಅಥವಾ ಶಿಕ್ಷೆ ಸಿಗಲೆಂದು ಅಧಿಕಾರಿಗಳ ವಾದ. ತಪ್ಪುಮಾಡಿದವರು ಹೇಗಾದರೂ ಮಾಡಿ ತಮ್ಮ "ಸಂರಕ್ಷಕ"ರನ್ನು ಸೇರಿಸಿ "ಒಳ್ಳೆಯವರಾಗಿಯೇ" ಉಳಿಯುತ್ತಾರೆ. ಆಳುವ ಪಕ್ಷದ ಮುಖಂಡರ, ಪ್ರಭಾವಿಗಳ, ಮಂತ್ರಿಗಳ ಕೈವಾಡ ತಪ್ಪಬೇಕೆಂದೂ, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದೂ ಅವರ ಹೇಳಿಕೆ. ಇಂದಿರಾಗಾಂಧಿಯವರಿಗೆ ಇದು ನುಂಗಲಾರದ ತುತ್ತು.

ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವಾಗ ತಮ್ಮ ಪಗಾರದ ಹೆಚ್ಚಳದ ಬೇಡಿಕೆಯನ್ನೂ ಮಂಡಿಸಿದರು ಅಧಿಕಾರಿಗಳು. ತಮಗೆ ಬೇರೆ ಉತ್ಪನ್ನ ಮೂಲಗಳಿಲ್ಲೆಂಬುದು ಇವರ ವಾದ. ಕೆಲಸಗಾರರ-ನೌಕರರ ಉತ್ಪನ್ನ ಹೆಚ್ಚಳವನ್ನು ಕುಂಠಿತಗೊಳಿಸುವ ಸುಗ್ರೀವಾಜ್ಞೆ ಹೊರಡಿಸುತ್ತಿರುವ ಮಹಾತಾಯಿ ಅಧಿಕಾರಿಗಳ ಪಗಾರ ಹೆಚ್ಚಳಕ್ಕೆ ಯಾವ ಸೂತ್ರ ಅನುಸರಿಸುತ್ತಾರೆಂಬುದನ್ನು ನೋಡಬೇಕಾಗಿದೆ. ಅಧಿಕಾರಿಗಳಿಗೆ ಪಗಾರ ಕಡಿಮೆಯೆಂದು ಹೇಳಿಕೊಂಡರೂ, ಅವರ ಜೀವನದ ವೈಖರಿ ನೋಡಿದವರೆಲ್ಲ "ಪಟ್ಟಭದ್ರ ಹಿತಾಸಕ್ತಿ"ಗಳೇ ಅವರ ಉತ್ಪನ್ನದ ಮೂಲಗಳೆಂಬುದನ್ನು ಅರಿತುಕೊಂಡಿದ್ದಾರೆ. ಇಂಥ ಹಗರಣಗಳು ದಿವಸ ಬೆಳಕು ಕಾಣುತ್ತಿವೆ.

ತನ್ನ ಪಕ್ಷದಂತೆಯೇ ಅಧಿಕಾರಿಗಳಲ್ಲೂ ಅಸಮಾಧಾನದ ಹೊಗೆಯೇಳುತ್ತಿರುವಾಗಲೇ ಇಂಥ ಸಭೆ ನಡೆದಿದೆ. ಮಂತ್ರಿಗಳ ಅಸಮರ್ಥತೆ, ಮಂತ್ರಿ–ಕಾರ್ಯದರ್ಶಿಗಳೊಳಗಿನ ಬಿರುಕು, ತಪ್ಪಿತಸ್ಥರನ್ನು ಸಂರಕ್ಷಿಸಲು ಧಾವಿಸುವ ರಾಜಕಾರಣಿಗಳ ಹಿಂಡು–ಇವೆಲ್ಲ ಈ ಸಭೆಯಲ್ಲಿ ಹೊರಬಿತ್ತು.

ಜೀತದಾಳುಗಳು

ಜೀತದಾಳುಗಳ ವಿಮೋಚನೆಯಾಗಬೇಕೆಂದು ಕಮ್ಯುನಿಸ್ಟ್ ಪಾರ್ಟಿ, ರೈತಸಂಘಗಳು ಹಲವಾರು ವರ್ಷಗಳಿಂದ ಹೋರಾಡುತ್ತ ಬಂದಿವೆ. ಆದರೆ ಕಾಂಗ್ರೆಸ್ ಸರಕಾರ ಜೀತದಾಳುಗಳನ್ನು ಬಿಡುಗಡೆ ಮಾಡಲಿಲ್ಲ. ಅವರ ವಿಮೋಚನೆಗಾಗಿ ಹೋರಾಡಿದವರನ್ನು ಜೈಲಿಗಟ್ಟಿತು, ಗುಂಡಿಕ್ಕಿ ಕೊಂದಿತು. ಯಾಕೆಂದರೆ ಹಳ್ಳಿಯ ಭೂಮಾಲಕ ವರ್ಗ ಕಾಂಗ್ರೆಸ್ಸಿನ ಬೆನ್ನೆಲುಬು. ಅವರನ್ನು ಅಸಮಾಧಾನಪಡಿಸಲು ಸಾಧ್ಯವಿಲ್ಲ. ವಿರೋಧಿ ಪಕ್ಷಗಳ ಚಳುವಳಿ ಬೆಳೆದಂತೆ, ಕಾಂಗ್ರೆಸ್ಸಿನ ಪ್ರಭಾವ ಕುಸಿಯುತ್ತಿದ್ದಂತೆ 1975 ರಲ್ಲಿ ತುರ್ತುಪರಿಸ್ಥಿತಿ ಹೇರಲ್ಪಟ್ಟಾಗ 20 ಅಂಶ ಕಾರ್ಯಕ್ರಮದಲ್ಲಿ ಜೀತದಾಳುಗಳ ಬಿಡುಗಡೆಯೂ ಒಂದಾಗಿತ್ತು.

ಆಗ ಕೆಲವೆಡೆ ಜೀತದಾಳುಗಳ ಬಿಡುಗಡೆಯಾಯಿತು ನಿಜ, ಆದರೆ ಅವರಿಗೆ ಪುನರ್ವಸತಿಯ ವ್ಯವಸ್ಥೆಯಾಗಲಿಲ್ಲ. ಕಾರಣ ಅವರೆಲ್ಲ ಉಪವಾಸ ಬೀಳುವಂತಾಯಿತು. ಜೀತದಾಳುಗಳ ಪುನರ್ವಸತಿಗಾಗಿ ಸರಕಾರ ಕೋಟ್ಯಾವಧಿ ರೂಪಾಯಿ ಖರ್ಚು ಮಾಡುತ್ತದೆಂದು ಸಾರಿತು ಕೂಡ. ಆದರೆ ಕಾಂಗ್ರೆಸ್ ಮುಂದಾಳುಗಳೂ, ಅಧಿಕಾರಿಗಳೂ ಅದನ್ನು ತಿಂದುಹಾಕಿದರಲ್ಲದೆ ಜೀತದಾಳುಗಳು ಆಳುಗಳಾಗಿಯೇ ಉಳಿದರು.

ಈಗ ಲೋಕಸಭೆಯಲ್ಲಿ ಮತ್ತೆ ಈ ಪ್ರಶ್ನೆ ಎತ್ತಲ್ಪಟ್ಟಿದೆ. ರಾಜ್ಯಗಳ ಅಂದಾಜು ಪ್ರಕಾರ ದೇಶದಲ್ಲಿ ಒಟ್ಟು ಜೀತದಾಳುಗಳ ಸಂಖ್ಯೆ 1.26 ಲಕ್ಷ. ಆದರೆ ಗಾಂಧಿ ಶಾಂತಿ ಪ್ರತಿಷ್ಠಾನದ ಅಂದಾಜಿನಂತೆ ದೇಶದಲ್ಲಿ 26.17 ಲಕ್ಷ ಜೀತದಾಳುಗಳು ಇನ್ನೂ ಬಿಡುಗಡೆಯ ದಾರಿ ನೋಡುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚಿರಬೇಕೆಂದು ವಿರೋಧಿ ಪಕ್ಷಗಳ ಅಂದಾಜು.

ಜೀತಪದ್ಧತಿ ನಿರ್ಮೂಲನ, ಹಾಗೂ ಅವರ ಪುನರ್ವಸತಿ ಕೆಲಸ ತೀವ್ರಗತಿಯಿಂದ ನಡೆಯಬೇಕಾಗಿದೆ. ಆದರೆ ಇಂದಿರಾ ಕಾಂಗ್ರೆಸ್ ಅಧಿಕಾರದಲ್ಲಿರುವತನಕ ಅದು ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಶ್ರೀಮಂತರೇ ಜೀತದಾಳುಗಳನ್ನು ಇಟ್ಟುಕೊಂಡಿದ್ದು, ಯಾವ ಕಾಯಿದೆ–ಕಾನೂನು ಬಂದರೂ ಅವನ್ನು ಮುರಿಯುವ ಶಕ್ತಿ ಅವರಿಗಿದೆ. ಅವರು ಜೀತದಾಳುಗಳನ್ನು ಬಿಡುಗಡೆ ಮಾಡುವುದೂ ಇಲ್ಲ, ಕೃಷಿ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಕೊಡುವುದೂ ಇಲ್ಲ.

ಭೂಮಾಲಕರೆಲ್ಲ ಭೂ ಸುಧಾರಣೆ ಕಾಯಿದೆಯಿಂದ ತಪ್ಪಿಸಿಕೊಳ್ಳಲು ಹೆಚ್ಚುವರಿ ಭೂಮಿಯನ್ನು ತಮ್ಮಲ್ಲೇ ಹಂಚಿಕೊಂಡಿರುವಾಗ, ಬಂಜರು ಭೂಮಿಗೂ ಕಾಲುಚಾಚುತ್ತಿರುವಾಗ ಜೀತದಾಳುಗಳ ಸಮಸ್ಯೆ ಬಗೆಹರಿಯುವುದಾದರೂ ಹೇಗೆ? ಬಲಿಷ್ಟವಾದ ರೈತಸಂಘದ ಚಳುವಳಿಯಿಂದ ಮಾತ್ರ ಇದು ಸಾಧ್ಯ. ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರಕಾರದಿಂದ ಮಾತ್ರ ಜೀತದಾಳುಗಳಿಗೆ ವಿಮೋಚನೆ, ಪುನರ್ವಸತಿ ಸಿಗಲು ಸಾಧ್ಯ.

ಮಹಾಜನ ಆಯೋಗ ಮತ್ತೆ ಗಡಿ ಸಮಸ್ಯೆ

ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಸ್ವಾಮಿಗಳು ಎರಡು ವರ್ಷಕ್ಕೊಮ್ಮೆ ಪರ್ಯಾಯ ನಡೆಸುತ್ತಾರೆ. ಆದರೆ ಕರ್ನಾಟಕ ಅಸೆಂಬ್ಲಿಗೆ ಆರಿಸಿ ಬಂದಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯ ವಿಧಾನಸಭೆ ಸದಸ್ಯರ ಪರ್ಯಾಯ ವರ್ಷಂಪ್ರತಿ ನಡೆಯುತ್ತದೆ. ಈ ರೂಢಿಗನುಸಾರ ಮಹಾರಾಷ್ಟ್ರ ಏಕೀಕರಣ ಸಮಿತಿಯ ಕರ್ನಾಟಕ ವಿಧಾನಸಭೆ ಸದಸ್ಯರು ಮಹಾಜನ ವರದಿ ರದ್ದಾಗಬೇಕೆಂದೂ, ಕಾರವಾರ-ಬೆಳಗಾವಿ ಮಹಾರಾಷ್ಟ್ರದಲ್ಲಿ ಸೇರಿಸಲ್ಪಡಬೇಕೆಂದು ಒತ್ತಾಯಿಸಿ ಹೋದ ತಿಂಗಳು ಮಹಾರಾಷ್ಟ್ರ ವಿಧಾನಸಭೆ ಮುಂದೆ ಆಮರಣ ಉಪವಾಸ ಕೈಗೊಂಡಿದ್ದರು. "ಕಾರವಾರ–ಬೆಳಗಾವಿ ಮಹಾರಾಷ್ಟ್ರದಲ್ಲಿ ಸೇರಿಸಲ್ಪಡುವ ತನಕ ಆಮರಣ ಉಪವಾಸ. ಇಲ್ಲವೇ ನಮ್ಮ ಹೆಣ ಹೊರಬೇಕು" ಎಂಬ ದೃಢ ಪ್ರತಿಜ್ಞೆಗೈದು ಆಮರಣ ಉಪವಾಸ ಪ್ರಾರಂಭ ಮಾಡಿದರು. ಶಿವಸೇನೆಯನ್ನು ಬಿಟ್ಟು ವಿರೋಧಿ ಪಕ್ಷಗಳನ್ನೊಳಗೊಂಡು ಯಾರೂ ಈ ಮಹಾಶಯರ "ಉಪವಾಸ" ತಮಾಷೆಗೆ ಬೆಂಬಲ ತೋರಿಸಲಿಲ್ಲ. ನಾಲ್ಕನೇ ದಿನ ಅಂತುಳೆಯವರ ವಾಗ್ದಾನಕ್ಕೊಪ್ಪಿಕೊಂಡು ಉಪವಾಸ ತ್ಯಜಿಸಿ, ಮಾತೆಯ ಆಶೀರ್ವಾದ ಪಡೆಯಲು ದಿಲ್ಲಿಗೆ ಸವಾರಿಮಾಡಿ "ಕರ್ನಾಟಕದಲ್ಲಿ ತಮಗೂ ತಮ್ಮ ಮತದಾರರಿಗೂ ಆಗುತ್ತಿರುವ ಅಪಾರ ಅನ್ಯಾಯಗಳ ಪುರಾಣ ಬಿಚ್ಚಿ ಮಾತೆಯ ಮನ ಒಲಿಸಲು ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸಿದರು. ಅಂತುಳೆ-ಗುಂಡೂರಾಯರು ನಿಮ್ಮ ಸಮಸ್ಯೆ ಬಗೆಹರಿಸುತ್ತಾರೆ ನೀವು ನಿರ್ಭೀತಿಯಿಂದ, ನಿಶ್ಚಿಂತೆಯಿಂದ ನಿರ್ಗಮಿಸಬಹುದೆಂಬ ಅಭಯವನ್ನಿತ್ತ ನಂತರ ಬೆಳಗಾವಿಯ ಗಡಿವೀರರು ನಿರ್ಮಲ ಮನಸ್ಸಿನಿಂದ ತಂತಮ್ಮ ಗೃಹಪ್ರವೇಶ ಮಾಡಿದರು. ಅನಂತರ ಅಂತುಳೆ–ಗುಂಡೂರಾಯರು 2–3 ಸಲ ಭೆಟ್ಟಿಯಾದರೂ ಕೂಡ ಗಡಿ ಸಂಬಂಧ ಚರ್ಚೆ ಮಾಡಲಿಲ್ಲವಂತೆ ಆದರೆ ಅದೇ ಸಮಯದಲ್ಲಿ ಇಡೀ ದೇಶವೇ ತಲೆತಗ್ಗಿಸುವಂಥ ಘಟನೆಯೊಂದು ಮುಂಬಯಿಯಲ್ಲಿ ನಡೆಯಿತು. ಹಲವಾರು ವರ್ಷಗಳಿಂದ ಮುಂಬಯಿ ಫೂಟ್‌ಪಾತಿನಲ್ಲಿ ಅಂಗಡಿಗಳನ್ನಿಟ್ಟು, ಉದ್ಯೋಗ ಮಾಡಿ ಉಪಜೀವನ ನಡೆಸುತ್ತಿದ್ದ ಸಾವಿರಾರು ಕೇರಳ, ತಮಿಳುನಾಡಿನ ಬಡಪಾಯಿಗಳನ್ನು ಬೋರ್ಗರೆಯುತ್ತಿದ್ದ ಮಳೆಯಲ್ಲೇ ಅಂತುಳೆ ಸರಕಾರ ಪೋಲೀಸರ ಸಹಾಯದಿಂದ ಹೊರಹಾಕಿತು. ಮಕ್ಕಳ-ಹೆಂಗಸರ ಪರಿಸ್ಥಿತಿ ಚಿಂತಾಜನಕ. (ಇವರನ್ನೆಲ್ಲ ಫೂಟ್‌ಪಾತಿನಿಂದ ಹೊರಹಾಕಬಾರದೆಂಬ ಆಜ್ಞೆ ಮುಂಬಯಿ ಹೈಕೋರ್ಟು ನೀಡಿದೆ.) ಕೇಂದ್ರ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಒಂದೇ ಪಕ್ಷದ ಸರಕಾರವಿರುವುದರಿಂದ ಗಡಿ ಪ್ರಶ್ನೆ ಬಗೆಹರಿಸಲು ಸುಲಭವೆಂದು ಇವರ ವಾದ. ಜನರ ಜಗಳದಿಂದಲೇ ತನ್ನ ಬೇಳೆಬೇಯುತ್ತದೆಂದು ತಿಳಿದ ಇಂದಿರಮ್ಮ ಇಂಥ ಸಮಸ್ಯೆಗಳತ್ತ ದೃಷ್ಟಿಹಾಯಿಸುತ್ತಿಲ್ಲ.

ಭಾಷಾ ಬಹುಮತದ ಆಧಾರದ ಮೇಲೆ ಗ್ರಾಮಗಳನ್ನು ಘಟಕವನ್ನಾಗಿ ಪರಿಗಣಿಸಿ, ಭೌಗೋಳಿಕ ಸುಲಗ್ನತೆ, ಆಡಳಿತೆಯ ಅನುಕೂಲತೆಗಳಿಗನುಗುಣವಾಗಿ ಗಡಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಕಮ್ಯುನಿಸ್ಟ್ ಪಾರ್ಟಿ ವಾದಿಸುತ್ತಿತ್ತು. ಆಂಧ್ರ–ಮಹಾರಾಷ್ಟ್ರ ಗಡಿ ಸಮಸ್ಯೆ ಬಗೆಹರಿಸುವಾಗ ನಿವೃತ್ತ ನ್ಯಾಯಾಧೀಶ ಪಾಟಸ್ಕರ ಸರ್ವ

(6ನೇ ಪುಟ ನೋಡಿ)

ಇರಾನಿನಲ್ಲಿ ಯಾದವೀ ಕಲಹ

ಮತಾಂಧತೆಯ ಬಗೆಗೆ ಜನತೆಗೊಂದು ಮಹಾ ಪಾಠ

ರುದ್ರಪ್ಪ ಕಾಯಿ

ಇರಾನಿನ ಮಹಾಜನತೆ ಇತ್ತೀಚಿನ ದಿನಗಳಲ್ಲಿ ತ್ಯಾಗ ಬಲಿದಾನಗಳಿಗೆ ಮತ್ತೊಂದು ಹೆಸರಾಗಿದ್ದಾರೆ. ಒಂದು ರಾಷ್ಟ್ರವಾಗಿ ಅದು ಅಸ್ತಿತ್ವಕ್ಕೆ ಬಂದಂದಿನಿಂದ ಒಂದು ಉತ್ತಮ ರಾಜಕೀಯ ವ್ಯವಸ್ಥೆಯನ್ನದು ಕಂಡೇ ಇಲ್ಲವೆಂದರೂ ನಡೆದೀತು. ದ್ವಿತೀಯ ಯುದ್ಧಕ್ಕೆ ಸ್ವಲ್ಪ ಮುಂಚೆ ಡಾ. ಮೊಸಾದೆಕ್‌ರ ನಾಯಕತ್ವದಲ್ಲಿದ್ದ ಸರಕಾರ ಒಂದನ್ನು ಮಾತ್ರ ರಾಷ್ಟ್ರಪ್ರೇಮಿ ಸರಕಾರವೆಂದು ಕರೆಯಬಹುದು. ಅಮೇರಿಕದ ಸಾಮ್ರಾಜ್ಯವಾದಿಗಳ ಕೈವಾಡದಿಂದ ಅವರನ್ನುರುಳಿಸಿ ಅಧಿಕಾರಕ್ಕೆ ಬಂದ ಶಹಾ ಆ ದೇಶದ ಅಂತಸ್ಸೈಯನವನ್ನೇ ಹುರಿಮಾಡಿದ್ದಾನೆ. ಸರಿಸುಮಾರು 30 ವರ್ಷ ನಡೆದ ಅವನ ಆಳ್ವಿಕೆಯಲ್ಲಿ ದೇಶದೊಳಗಡೆದೇಶೀಯ ಬಂಡವಾಳಗಾರನೂ ಬೆಳೆಯದಂತೆ ನೋಡಿಕೊಂಡದ್ದೇ ಅಲ್ಲದೆ ಇರಾನನ್ನು ಸಾಮ್ರಾಜ್ಯವಾದದ ಒಂದು ನೆಲೆಯನ್ನಾಗಿ ಆತ ಪರಿವರ್ತಿಸಿದ್ದ. ಈ ದಿನಗಳಲ್ಲಿ ಜನತೆ ಅನುಭವಿಸಬಾರದ ಕಷ್ಟವನ್ನು ಅನುಭವಿಸಿದ್ದೇ ಅಲ್ಲದೆ ವೀರೋಚಿತವಾದ ಹೋರಾಟವನ್ನೂ ಮಾಡಿದ್ದಾರೆ. 1960ರ ದಶಕದ ನಂತರ ಶಹಾನ ಪತನದವರೆಗೆ ಮತ್ತು ಈಗ ಇಸ್ಲಾಂ ಮತೀಯವಾದಿಗಳ ರಾಜ್ಯ ಸ್ಥಾಪನೆಯಾದ ನಂತರ ಅಲ್ಲಿನ ಎಡ ಶಕ್ತಿಗಳು ಮಾಡಿದ ತ್ಯಾಗ ಅಪಾರವಾದುದು, ಅವರು ಸಲ್ಲಿಸಿದ ಬಲಿದಾನ ವೀರೋಚಿತವಾದುದು. ನವವಸಾಹತುವಾದದ ಬೊಗಳು ನಾಯಿಯಾಗಿದ್ದ ಶಹಾನ ವಿರುದ್ಧ ಈ ಎಡ ಶಕ್ತಿಗಳು ಸಶಸ್ತ್ರ ಹೋರಾಟ ನಡೆಸಿದ್ದೇ ಅಲ್ಲದೆ ಆಯೋತೊಲ್ಲಾ ಖೊಮೇನಿ ನೇತೃತ್ವದ ಹೊಸ ಇಸ್ಲಾಂ ಸರಕಾರ ತರಲು ಅವರು ನಡೆಸಿದ ಹೋರಾಟ ಚಿರಸ್ಮರಣೀಯವಾದದ್ದು. ಆದರೆ ಅಂದು ಯಾರು ಶಹಾನ ವಿರುದ್ಧ ಪ್ರಬಲವಾದ ಹೋರಾಟವನ್ನು ಕಟ್ಟಿದರೋ, ಯಾರು ಭುಗಿಲೆದ್ದ ಜನತೆಯೊಂದಿಗೆ ಐಕ್ಯದಿಂದ ಕಾದಾಡಿ ಶಹಾನ ಕಪಿಮುಷ್ಟಿಯಿಂದ ಇರಾಣವನ್ನು ವಿಮೋಚನೆಗೊಳಿಸಿದರೋ ಅವರಿಂದು ಇರಾಣದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಸಾವಿರಾರು ಯುವಕ-ಯುವತಿಯರು ಹಿಂಸೆಯಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಕಮ್ಯುನಿಸ್ಟ್ ಚಳುವಳಿಯ ವಿವಿಧ ಗುಂಪುಗಳಿಗೆ ಸೇರಿದ ಸದಸ್ಯರನ್ನು ಅಸಂಖ್ಯ ಸಂಖ್ಯೆಯಲ್ಲಿ ಇಂದಿನ ಹೊಸ ಆಳುಗರು ಕೊಲೆ ಮಾಡುತ್ತಿದ್ದಾರೆ. ಇತಿಹಾದ-ಎ-ಮಲ್ಲಿ-ಎ-ಖಿಜಿನಸ್ ಎಂಬ ಇರಾಣದ ಮಹಿಳಾ ಸಂಘಟನೆಯು ಇತ್ತೀಚೆಗೆ ಹೊರಡಿಸಿದ ಹೇಳಿಕೆಯಲ್ಲಿ ಹೀಗೆ ಹೇಳಲಾಗಿದೆ: "11 ರಿಂದ 22 ವರ್ಷದೊಳಗಿನ ಯುವಕರು, ಅವರು ಯಾರು ಎಂದು ಗುರುತಿಸುವುದಕ್ಕಿಂತ ಮುಂಚೆಯೇ ಮರಣ ದಂಡನೆಗೆ ಗುರಿಯಾಗುತ್ತಾರೆ." ಎಡಶಕ್ತಿಗಳಿಗೆ ಬೆಂಬಲ ನೀಡಿದರೆ ಸಾಕು, ಅವರಿಗೆ ಹಣ ನೀಡಿದರೂ ಸಾಕು, ಅಂಥವರು ಇರಾಣದಲ್ಲಿಂದು ಸಾವನ್ನು ಎದುರು ನೋಡಬೇಕಾಗುತ್ತದೆ.

ಮುಂದುವರಿದು ಅದೇ ಹೇಳಿಕೆ ಹೀಗೆ ಹೇಳುತ್ತದೆ. "ಶಹಾನನ್ನು ಕಿತ್ತೆಸೆದ ತರುವಾಯ ಇಸ್ಲಾಂ ಆಡಳಿತಗಾರರು ಮಾಡಿದ ಅಪರಾಧಗಳದ್ದು ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ಈ ಸರಕಾರದ ವಿರೋಧಿಗಳ ಚಿತ್ರಹಿಂಸೆ ಹಾಗೂ ಮರಣ ದಂಡನೆ, ಸಂಪರ್ಕ ಮಾಧ್ಯಮಗಳ ಮೇಲೆ ಪೂರ್ಣ ಸೆನ್ಸಾರ್‌ಶಿಪ್, ಕುರ್ದಿಸ್ಥಾನದ ಮೇಲೆ ನಡೆಸಿದ ವ್ಯಾಪಕ ದಾಳಿ, ಅವರ ಸಾಮೂಹಿಕ ಕಗ್ಗೊಲೆ, ವಿಶ್ವವಿದ್ಯಾನಿಲಯವನ್ನು ಮುಚ್ಚುವುದು, ಮಹಿಳೆಯರ ಮೇಲೆ ದಮನ, ಪುಸ್ತಕದ ಅಂಗಡಿಗಳ ಮೇಲೆ ದಾಳಿ ಹೀಗೆ ಇದಕ್ಕೆ ಕೊನೆ ಇಲ್ಲ."

ಸಾಮ್ರಾಜ್ಯವಾದಕ್ಕೆ ವಿರುದ್ಧವಾಗಿ, ದೇಶಪ್ರೇಮಿ ಪ್ರಜಾಸತ್ತಾತ್ಮಕ ಕ್ರಾಂತಿಯೊಂದು ನಡೆಯುತ್ತಿದೆ ಎಂದು ಕನಸು ಕಂಡಿದ್ದ ಇರಾಣದ ಜನ ಇಂದು ಕಂಗಾಲಾಗಿದ್ದಾರೆ. ಇಸ್ಲಾಂನ ಹೆಸರಿನಲ್ಲಿ, ಸಾಮ್ರಾಜ್ಯವಾದದ ಹೆಸರಿನಲ್ಲಿ ಇಂದು ವಿವಿಧ ಕಮ್ಯುನಿಸ್ಟ್ ಗುಂಪುಗಳ ಮೇಲೆ ದಾಳಿ ನಡೆದಿದೆ. ಖೊಮೇನಿಯವರ ನಾಯಕತ್ವದ ಕ್ರಾಂತಿಯ ತರುವಾಯ ಇರಾಣದ ದುಡಿಯುವ ಜನತೆ ಎದುರಿಸುತ್ತಿದ್ದ ಸಮಸ್ಯೆಗಳು ಪರಿಹಾರಗೊಳ್ಳುವವು ಎಂಬ ನಂಬುಗೆ ಇತ್ತು. ಆದರೆ ವಾಸ್ತವ ಪರಿಸ್ಥಿತಿ ಎಂದರೆ ಅವು ಪರಿಹಾರಗೊಳ್ಳುವ ಬದಲು ಮತ್ತಷ್ಟು ಜಟಿಲಗೊಂಡಿವೆ.

ಇರಾಣ ಜನತೆಯ ಬಹು ಮುಖ್ಯ ಭಾಗವಾದ ಕಾರ್ಮಿಕವರ್ಗ ಹಾಗೂ ರೈತಾಪಿ ಜನತೆಯ ಜೀವನ ಪರಿಸ್ಥಿತಿಯಲ್ಲಿ ಶಹಾನ ಪತನದ ತರುವಾಯ ಯಾವುದೇ ಬದಲಾವಣೆ ಕಂಡುಬಂದಿಲ್ಲ. ಆದರೆ ಅವರ ಮೇಲಿನ ದಾಳಿ ಇನ್ನೂ ತೀವ್ರಗೊಂಡಿದೆ. ಒಂದು ಕಾಲಕ್ಕೆ ಶಹಾನ ಪತನದ ಕ್ರಾಂತಿಗೆ ನಾಯಕತ್ವ ಕೊಟ್ಟ ಜನ ಇಂದು ಪ್ರತಿಕ್ರಾಂತಿಕಾರಿಗಳಾಗಿದ್ದಾರೆ. ಜನತೆಯ ವಿಮೋಚನೆಗೆ ನಾಯಕತ್ವ ಕೊಡುವ ಬದಲು ಅವರಿಂದು ಇರಾಣದ ಬಂಡವಾಳದಾರರ-ಭೂಮಾಲಕರ ಬಂಟರಾಗಿದ್ದಾರೆ. ಇಸ್ಲಾಂ ಧರ್ಮದ ಹೆಸರಿನಲ್ಲಿ ಬಂಡವಾಳದಾರ–ಭೂಮಾಲೀಕರ ಹಿತವನ್ನು ಅವರು ರಕ್ಷಣೆ ಮಾಡುತ್ತಿದ್ದಾರೆ.

ಶಹಾವಿರೋಧಿಕದನದಲ್ಲಿ ಉದ್ಭವವಾಗಿದ್ದ ಕಾರ್ಮಿಕ ಸಂಸ್ಥೆಗಳಲ್ಲಿ ಇಸ್ಲಾಂ ಬೆಂಬಲಿಗರು ಒಳಹೊಕ್ಕು ಕಾರ್ಮಿಕರ ಸಂಘಟನಾ ಹಕ್ಕನ್ನು ದಮನ ಮಾಡಿದ್ದಾರಲ್ಲದೇ ಕೊಲೆಸುಲಿಗೆಗಳಿಗೆ ಅವರನ್ನು ಗುರಿಮಾಡಿದ್ದಾರೆ. ಸಂಕಷ್ಟಕ್ಕೆ ಗುರಿಯಾದ ಕಾರ್ಮಿಕವರ್ಗ ಅವರ ಆಳುಗರು ಹೇಳಿದಂತೆ ಕೇಳಬೇಕೆಂದು ಅವರ ಮೇಲೆ ಹಿಂಸೆಯನ್ನು ಹೇರಲಾಗಿದೆ. ಉತ್ತಮ ಜೀವನಮಟ್ಟಕ್ಕಾಗಿ ಅವರು ನಡೆಸುವ ಹೋರಾಟಗಳನ್ನು ಅಲ್ಲಿ ಅತೀ ಕ್ರೂರವಾಗಿ ಹತ್ತಿಕ್ಕಲಾಗಿದೆ.

ಸಾವಿರಾರು ವರ್ಷಗಳಿಂದ ಮುಲ್ಲಾಗಳ ಕೈಯಲ್ಲಿ ಕೇಂದ್ರೀಕೃತವಾಗಿರುವ ಭೂ-ಕೇಂದ್ರೀಕರಣ ಇನ್ನೂ ಮುಂದುವರಿಯುತ್ತಿದೆ. ಅದು ಮುಂದುವರಿಯುತ್ತಿರುವುದು ಒಂದು ಪ್ರತ್ಯೇಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ. ಶಹಾನ ವಿರುದ್ಧ ನಡೆದ ಕದನದ ತರುವಾಯ ರೈತಾಪಿ ಜನತೆ ತಮಗೆಲ್ಲ ಭೂಮಿ ಸಿಗುವುದೆಂದು ಭ್ರಮಿಸಿದ್ದರು. ಅದಕ್ಕಾಗಿ ಅವರು ಹೋರಾಟವನ್ನೂ ಮಾಡಿದರು. ಮುಲ್ಲಾಗಳ ಜಮೀನ್ದಾರಶಾಹಿ ನಾಶವಾಗುವುದೆಂದೇ ಅವರು ಶಹಾ ವಿರೋಧಿ ಕ್ರಾಂತಿಯಲ್ಲಿ ಭಾಗವಹಿಸಿದರು. ಆದರೆ ಖೊಮೇನಿಯವರ ನಾಯಕತ್ವದ ಮತಾಂಧರ ಸರಕಾರ ಬಂದು 31 ತಿಂಗಳಾಗಿದ್ದರೂ ಈ ದಿಸೆಯಲ್ಲಿ ಯಾವುದೇ ಕೆಲಸ ನಡೆದಿಲ್ಲ. ಬದಲಾಗಿ ಹಿಂದಿನಂತೇ ಭೂಮಿಯನ್ನು ಉಳಬೇಕೆಂದು ರೈತಾಪಿ ಜನತೆಗೆ ಈ ಸರಕಾರ ಆಜ್ಞೆಗಳನ್ನು ಹೊರಡಿಸುತ್ತಿದೆ. ಭೂ ಸಂಬಂಧದ ಕುರಿತಾದ ಕಾನೂನೊಂದನ್ನು ಜಾರಿಮಾಡುವುದಾಗಿ ತಾನು ಕೊಟ್ಟ ಆಶ್ವಾಸನೆಯನ್ನು ಈ ಸರಕಾರ ಈಡೇರಿಸಿಲ್ಲ. ಆದರೆ ರೈತರು ನಡೆಸುವ ಹೋರಾಟಗಳನ್ನು ಕ್ರೂರವಾಗಿ ದಮನ ಮಾಡುತ್ತಿದೆ. ರೈತರಲ್ಲಿ ಭೂಮಿಗಾಗಿ ಹೆಚ್ಚು ಪ್ರಬಲವಾದ ಆಕಾಂಕ್ಷೆಗಳು ಹುಟ್ಟಿರುವ ಹಿನ್ನೆಲೆಯಲ್ಲಿ ಮುಲ್ಲಾಗಳ ಜಮೀನ್ದಾರಶಾಹಿತ್ವವನ್ನು ಈ ಸರಕಾರ ಉಳಿಸಬೇಕಿರುವುದರಿಂದ ಸಹಜವಾಗೇ ವಿಪರೀತ ಕ್ರೂರ ದಮನವನ್ನು ಮಾಡಬೇಕಾದ ಅವಶ್ಯಕತೆ ಬರುತ್ತದೆ.

ಇಸ್ಲಾಂ ಧರ್ಮದ ಹೆಸರಿನಲ್ಲಿ ಮಹಿಳೆಯರ ಮೇಲಿನ ದಬ್ಬಾಳಿಕೆ ಹಿಂದಿನದಕ್ಕಿಂತ ನೂರು ಪಾಲು ಹೆಚ್ಚಿದೆ. ಇರಾಣ ಸಮಾಜದ ಇತಿಹಾಸದಲ್ಲೇ ಗೊತ್ತಿರದಂಥ ದಬ್ಬಾಳಿಕೆ ಮಹಿಳೆಯ ಮೇಲೆ ಇರಾನ್‌ದಲ್ಲಿ ನಡೆಯುತ್ತಿದೆ. ಹಿಂದೆ 'ಸವಕ್' ಎನ್ನುವ ಶಹಾನ ಗುಪ್ತದಳ ಯಾವುದನ್ನು ಮರೆಯಲ್ಲಿ ಮಾಡುತ್ತಿತ್ತೋ ಅದನ್ನಿಂದು ಖೊಮೇನಿಯ 'ಕ್ರಾಂತಿಕಾರಿ ದಳಗಳು' ಬಯಲಿನಲ್ಲಿ ಮಾಡುತ್ತಿವೆ. ಮೇಲೆ ಹೇಳಿದ ಮಹಿಳಾ ಸಂಘಟನೆ ಈ ಕೆಳಗಿನ ವಿಷಯಗಳನ್ನು ಬಯಲಿಗೆಳೆದಿದೆ.

1. ಮಹಿಳೆಯರನ್ನು ಬಯಲಿನಲ್ಲಿ ಬೆತ್ತಲೆಗೊಳಿಸಿ ಹೊಡೆಯುವುದು, ಗಾಯಗೊಳಿಸುವುದು.

2. ಜೈಲಿನಲ್ಲಿ ಅವರಿಗೆ ಕಾಮುಕ ಚಿತ್ರಹಿಂಸೆ ಕೊಡುವುದು.

3. ಮರಣದಂಡನೆಗೆ ಗುರಿ ಮಾಡುವುದಕ್ಕಿಂತ ಮುಂಚೆ ಮಹಿಳಾ ಕೈದಿಗಳನ್ನು ಸಾಮೂಹಿಕ ಸಂಭೋಗಕ್ಕೆ ಗುರಿಮಾಡುವುದು.

4. ಬಸುರಿ ಹೆಂಗಸರನ್ನೂ, ಪುಟ್ಟ ಹುಡುಗಿಯರನ್ನೂ ಮರಣದಂಡನೆಗೆ ಗುರಿಮಾಡುವುದು.

9 ವರುಷದ ಹುಡುಗಿಯೊಂದನ್ನು ಮರಣದಂಡನೆಗೆ ಗುರಿ ಮಾಡುವ ಸಂದರ್ಭದಲ್ಲಿ ಅವಳನ್ನು 40 ವರುಷದ ಗಂಡಸಿಗೆ ಹೋಲಿಸಿ ಆ ಕೊಲೆಯನ್ನು ಸಾರ್ವಜನಿಕವಾಗಿ ಇರಾನ್ ಸರಕಾರ ಸಮರ್ಥಿಸಿದ್ದು ನಮ್ಮ ಓದುಗರಿಗೆ ಗೊತ್ತಿರಬಹುದು.

ಈ ಎಲ್ಲ ದಮನ ಸಾಲದೆಂಬಂತೆ, ಈ ಎಲ್ಲ ಸಾಮಾಜಿಕ-ರಾಜಕೀಯ ಸಮಸ್ಯೆಗಳ ಪರಿಣಾಮವಾಗಿ ಹೆಚ್ಚುತ್ತಿದ್ದ ಜನತೆಯ ಹೋರಾಟವನ್ನು ದಮನ ಮಾಡಲೆಂದೇ ಇರಾಕದೊಂದಿಗೆ ಇರಾನ್ ಕದನ ಹೂಡಿದೆ. ಶಾಂತಿಯುತ ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಲು ಇರಾಕ್ ನೀಡಿದ ಕರೆಯನ್ನು ಇರಾನ್ ನೂರು ಬಾರಿಯಾದರೂ ತಿರಸ್ಕರಿಸಿರಬಹುದು. ಇದರ ಪರಿಣಾಮವಾಗಿ ಇರಾನ್‌ನ ಅರ್ಥವ್ಯವಸ್ಥೆ ಸಂಪೂರ್ಣ ನಾಶವಾಗಿರುವುದೇ ಅಲ್ಲದೆ, ಜನತೆಗೆ ಹೇಳಲಸಾಧ್ಯವಾದಷ್ಟು ಕಷ್ಟಗಳನ್ನು ತಂದೊಡ್ಡಿದೆ. ಅವಶ್ಯ ವಸ್ತುಗಳ ಅಭಾವ, ವಿಪರೀತ ಬೆಲೆ ಏರಿಕೆ, ಹಣದುಬ್ಬರ, ಸಮಾಜಘಾತುಕ ಶಕ್ತಿಗಳ ಕೈವಾಡ ಎಲ್ಲ ಸೇರಿ ಅರ್ಥವ್ಯವಸ್ಥೆಯನ್ನು ಸಂಪೂರ್ಣ ತಮ್ಮ ಹತೋಟಿಗೆ ತೆಗೆದುಕೊಂಡಿದೆ.

ಯಾವ ಸಾಮ್ರಾಜ್ಯವಾದವನ್ನು ವಿರೋಧಿಸಲು ಖೊಮೇನಿಯ ಸರಕಾರ ಅಸ್ತಿತ್ವಕ್ಕೆ ಬಂತೋ, ಅದೇ ಸಾಮ್ರಾಜ್ಯವಾದದೊಂದಿಗೆ ಈಗದು ಚಕ್ಕಂದವಾಡಲು ಪ್ರಾರಂಭಿಸಿದೆ. ಮಧ್ಯಪೂರ್ವದಲ್ಲಿ ಈಜಿಪ್ಟ ಅಮೇರಿಕದ ಕೈಬಂಟನೆಂದು ಎಲ್ಲರಿಗೂ ತಿಳಿದಿರುವ ಸಂಗತಿ. ಇರಾಕದ ಅಣುಸ್ಥಾವರವನ್ನು ಮೊನ್ನೆಮೊನ್ನೆಯೇ ಅವರು ನಾಶಮಾಡಿದರೆಂದು ಎಲ್ಲರಿಗೂ ಗೊತ್ತಿದೆ. ಮಧ್ಯಪ್ರಾಚ್ಯದ ಶಾಂತಿಗೆ ಮಾರಕವಾದ ಕೆಲಸಮಾಡುವ ಈಜಿಪ್ಟದೊಂದಿಗೆ ಒಂದು ಖೊಮೇನಿ ಗುಪ್ತ ಒಪ್ಪಂದ ಮಾಡಿಕೊಂಡಿದ್ದು, ಅಲ್ಲಿಂದಲೇ ಈಗ ಶಸ್ತ್ರಾಸ್ತ್ರ ಖರೀದಿಯಾಗುತ್ತಿದೆ. ಆದ್ದರಿಂದ ಸಾಮ್ರಾಜ್ಯವಾದದ ವಿರೋಧ ಈಗ ಬರೀ ಒಂದು ಬಾಯಿಮಾತೇ ವಿನಃ ಸಾಮ್ರಾಜ್ಯವಾದಕ್ಕೆ ವಿರುದ್ಧವಿರುವ ಇರಾನ್ನಿನ ಜನತೆಗೆ ಅದರಿಂದ ಯಾವ ಪ್ರಯೋಜನವೂ ಇಲ್ಲದಂತಾಗಿದೆ.

ಈ ದಿವಾಳಿಖೋರ ನೀತಿಗಳ ಪರಿಣಾಮವಾಗಿ ಆಳುವ ಇಸ್ಲಾಮಿಕ್ ಪಕ್ಷದೊಳಗೇ ತಿಕ್ಕಾಟ ಪ್ರಾರಂಭವಾಗಿ ಅವರಲ್ಲೇ ಮುಸ್ಲಿಂ ಫ್ಯಾಸಿಸ್ಟರು ಅಧ್ಯಕ್ಷರಾಗಿದ್ದ ಬನಿ ಸದರ ಅವರು ದೇಶಬಿಟ್ಟು ಓಡಿಸಿ ಆಡಳಿತವನ್ನು ಪೂರ್ತಿ ತಮ್ಮ ಕೈಯಲ್ಲೇ ತೆಗೆದುಕೊಂಡರು.

ಅಲ್ಲಿಂದಲೇ ಈ ಯಾದವೀ ಕಲಹ ಬಹಿರಂಗ ರೂಪವನ್ನು ಪಡೆದದ್ದು. ಕಳೆದ ಜುಲೈನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಇಸ್ಲಾಂ ರಿಪಬ್ಲಿಕ್ ಪಕ್ಷದ ಸಂಪೂರ್ಣ ನಾಯಕತ್ವವೇ ನಾಶವಾಯಿತು. ಅದರ ತರುವಾಯ ಈ ತಿಂಗಳ ಎರಡರಂದು ನಡೆದ ಆಸ್ಫೋಟದಲ್ಲಿ ದೇಶದ ಅಧ್ಯಕ್ಷ ಪ್ರಧಾನಿ ಇಬ್ಬರೂ ಸಾವಿಗೀಡಾಗಿದ್ದಾರೆ. ಈ ದಾಳಿಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಮತಾಂಧತೆಯ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಖೊಮೇನಿ ಸರಕಾರ ಪ್ರಬಲವಾದ ವಿರೋಧವನ್ನು ಜಾತ್ಯಾತೀತ ಶಕ್ತಿಗಳಿಂದ ಎದುರಿಸುತ್ತಿದೆಯಲ್ಲದೆ, ಈ ಶಕ್ತಿಗಳು ಇರಾನಿನ ಜನತೆಯ ಬೆಂಬಲವನ್ನು ಸಾಕಷ್ಟು ಗಳಿಸಿವೆಯಾದ್ದರಿಂದಲೇ ತಾವು ದಾಳಿಮಾಡಬೇಕೆಂದ ಸ್ಥಳವನ್ನು ನಿರಾಯಾಸವಾಗಿ ದಾಳಿಮಾಡುತ್ತಾರೆ.

ಇಸ್ಲಾಂದ ಹೆಸರಿನಲ್ಲಿ ಮತಾಂಧತೆಯನ್ನು ಹರಡಲು ಪ್ರಯತ್ನಿಸುತ್ತಿದ್ದ ಜಾಗತಿಕ ಪ್ರತಿಕ್ರಾಂತಿಕಾರಿಗಳಿಗೆ ಇದರಿಂದ ಮಹಾಸೋಲಾಗುವುದರಲ್ಲಿ ಸಂದೇಹವಿಲ್ಲ. ಪಾಕಿಸ್ಥಾನ, ಬಾಂಗ್ಲಾದೇಶಗಳ ಸರ್ವಾಧಿಕಾರಿಗಳೂ ಕೂಡ ತಮ್ಮ ಹಿಂಸಾ ಸಾಮ್ರಾಜ್ಯವನ್ನು ರಕ್ಷಿಸಲು ಕೂಡ ಇದೇ ಮತಾಂಧತೆಯನ್ನು ಬಳಸುತ್ತಿದ್ದಾರೆ. ಅಫಘಾನದ ಜನತಾ ಕ್ರಾಂತಿಯನ್ನು ಉರುಳಿಸಲು ಸಾಮ್ರಾಜ್ಯವಾದಿಗಳು ಇದನ್ನೇ ಬಳಸುತ್ತಿದ್ದಾರೆ. ಜಗತ್ತಿನ ತುಂಬ ಇಸ್ಲಾಂ ರಾಜ್ಯ ಸ್ಥಾಪನೆಯ ಕನಸು ಕಾಣುತ್ತಿದ್ದ ಮುಸ್ಲಿಂ ಮತೀಯವಾದಿಗಳ ಕನಸು ಇರಾನಿನಲ್ಲಿ ಮಣ್ಣುಗೂಡುತ್ತಿದೆ. ಧರ್ಮಾಂಧತೆ ರಾಜಕೀಯದೊಂದಿಗೆ ಕೂಡಲಾರದೆಂಬುದಕ್ಕೆ ಇರಾನಿನ ಯಾದವೀ ಕಲಹ ಸ್ಪಷ್ಟ ಉದಾಹರಣೆ. ಜಗತ್ತಿನ ಎಲ್ಲಾ ಜನತೆ ಇದರಿಂದ ಕಲಿಯಬೇಕಾದದ್ದು ಬಹಳಷ್ಟಿದೆ. ಮತಾಂ

(5ನೇ ಪುಟನೋಡಿ)

ಭಾರತದ ದುರ್ಭರ ಬದುಕಿಗೆ ಕನ್ನಡಿ ಹಿಡಿಯುವ ‘ಸುಭಾಷಿಣಿ’

[‘ಸುಭಾಷಿಣಿ’ ಭಾರತ ಹಾಗೂ ನೆರೆಹೊರೆಯ ಕಥೆಗಳು. ಪ್ರಧಾನ ಸಂಪಾದಕ : ನಿರಂಜನ; ಪ್ರಕಾಶನ : ನವಕರ್ನಾಟಕ ಬೆಲೆ-10 ರೂ.]

“ನಾವು ಸೋದರರು ನಮ್ಮ ಕಾಲಮೇಲೆ ನಾವು ನಡೆಯುತ್ತೇವೆ, ನಮ್ಮ ಕೈಗಳಿಂದ ದುಡೀತೇವೆ. ನಾವೆಲ್ಲರೂ ಒಂದೇ ಭೂಮಿಗೆ–ಬಾನಿನಡಿಯ ಈ ಪುರಾತನ ಭೂಮಿಗೆ ಸೇರಿದವರು. ನಮಗೆಲ್ಲ ಒಬ್ಬನೇ ಸಾಮಾನ್ಯ ಶತ್ರು; ನಮ್ಮ ಬಾಯಿಂದ ತುತ್ತು ಅನ್ನವನ್ನು ಕಸಿಯುವವ; ನಮ್ಮನ್ನು ಸಾವಿಗೆ ತಳ್ಳುವವ; ಬೂದಿ ಕೆಂಡಗಳ ರಾಶಿಯನ್ನು ನಮ್ಮ ಮೇಲೆ ಸುರಿಯುವವ...“ಹಸಿವು ಮತ್ತು ನೋವು ಮನುಷ್ಯನನ್ನು ಕಾಡಿದಾಗ ಮನುಷ್ಯರೆಲ್ಲರು ಒಂದೇ...” “ಪ್ರತಿಯೊಬ್ಬನೂ ತನ್ನ ಹಣೆಬರಹವನ್ನು ತಾನೇ ನೋಡಿಕೊಳ್ಳಬೇಕಾದಂತ ಸಮಾಜದಲ್ಲಿ ಬೇರೆಯವರನ್ನು ಮೋಸಗೊಳಿಸಿ, ಅವರ ಕಣ್ಣಿಗೆ ಮಣ್ಣೆರಚಿ ಇತರರ ವೆಚ್ಚದಲ್ಲಿ ಯಶಸ್ಸು ಗಳಿಸುವುದು ಸಹಜ...”

“...ದಟ್ಟ ಕಾಡುಗಳ ಮಧ್ಯೆ ಬೆಟ್ಟಗಳ ಮೇಲೆ ಮನುಷ್ಯ ವಾಸಿಸುತ್ತಾನೆ. ಬೋರಿಡುವಬಿರುಗಾಳಿಯನ್ನು, ಕ್ರೂರ ನಿರ್ದಯ ಹವಾಮಾನವನ್ನು ಎದುರಿಸಿ ನಿಂತು ಅವನ ಒಲೆಯ ಬೆಂಕಿ ಉರಿಯುತ್ತದೆ”.

ಇಲ್ಲಿ ಯಾವುದೋ ಸಿದ್ಧಾಂತವನ್ನು ವಾಚಕರಿಗೆ ಮಂಡಿಸುತ್ತೇನೆಂದು ತಿಳಿಯಬೇಡಿ. ಇದು ಹಸಿದ ಜನಗಳ ನೋವಿನ ಸಿದ್ಧಾಂತ. ದಟ್ಟದಾರಿದ್ರ್ಯದ ಕಿತ್ತುತಿನ್ನುವ ಬದುಕನ್ನು ಚಿತ್ರಿಸುವ ‘ಗೋಪಿನಾಥಮೊಹಂತಿ’ಯವರ ‘ಇರುವೆಗಳು’ ಕಥೆಯಲ್ಲಿನ ಕೂಗು. ಒರಿಸ್ಸಾದ ಈ ಕತೆಗಾರ ಒರಿಸ್ಸಾದೊಳಗಿಂದ ಅಥವಾ ಒರಿಸ್ಸಾವನ್ನು ಮೀರಿ ನೋಡುವ ಈ ಧಾಟಿ ನೋಡಿ : “...ಈ ಜಾಗ ಒರಿಸ್ಸಾದಲ್ಲಿ ಇಲ್ಲದೆ ಇರಬಹುದು. ಆದರೆ ಈ ವಿಶಾಲ ಜಗತ್ತಿನ ಪುರಾತನ ಹಸಿವಿನಿಂದ ಕುಗೆಟ್ಟ ಅದರ ಮನುಷ್ಯ ಕುಲದ ಒಂದು ಭಾಗವಂತೂ ಖಂಡಿತ”.

ಹೀಗೆ ಮನುಷ್ಯನ ಮೂಲಭೂತ ಸಂಗತಿಗಳ ಕಡೆ ಗಮನ ಸೆಳೆಯುತ್ತ ಕತೆಯು ಕೊನೆಯಲ್ಲಿ ಅಧಿಕಾರಿ ವರ್ತಿಸುವ ರೀತಿ ಸೋಜಿಗವಾದರೂ ಸತ್ಯವಾದುದು.

ಭಾರತದ ಧಾರುಣ ಜೀವನವನ್ನು ತುಂಬಾ ಸಮರ್ಥವಾಗಿ ತಮ್ಮ ಕೃತಿಗಳಲ್ಲಿ ಮೂಡಿಸುತ್ತ ಬಂದಿರುವ ‘ಹರಿಶ್ಚಂದ್ರ’ರು ತಮ್ಮ ಗಫೂರನ ಎತ್ತು ಕತೆಯಲ್ಲಿ ಸಂಯಮದಿಂದ ನೋವನ್ನು ವಿಷಧಪೂರ್ಣವಾಗಿ ವ್ಯಕ್ತಪಡಿಸಿರುವ ರೀತಿ ತುಂಬಾ ಮನೋಜ್ಞವಾದುದು. ಇಲ್ಲಿಯ ಗಫೂರನ ಪ್ರಾರ್ಥನೆ ತುಳಿತಕ್ಕೆ ಸಿಕ್ಕಿರುವ ಇಡೀ ಮಾನವ ಜನಾಂಗದ ಕೂಗಿನಂತಿದೆ: “ಅಲ್ಲಾ! ನನ್ನ ಮಹೇಶ ನೀರಡಿಕೆಯಿಂದ ಸತ್ತುಹೋಯಿತು. ಅದಕ್ಕೆ ಮೇಯಲು ಯಾರೂ ಒಂದು ಗೇಣು ಭೂಮಿಯನ್ನು ಬಿಡಲಿಲ್ಲ. ನೀನು ನನಗೆಷ್ಟು ಬೇಕಾದರೂ ಶಿಕ್ಷೆಯನ್ನು ವಿಧಿಸು; ಆದರೆ ಹಸಿದವರಿಗಾಗಿ ನೀನು ಕೊಟ್ಟಂತಹ ಹುಲ್ಲನ್ನು, ನೀರಡಿಸಿದವರಿಗಾಗಿ ನೀನು ಕೊಟ್ಟ ನೀರನ್ನು ಯಾರು ಅದಕ್ಕೆ ಕೊಡಲಿಲ್ಲವೋ, ಅವರನ್ನು ನೀನೆಂದಿಗೂ ಕ್ಷಮಿಸಬೇಡ”.

“ಯಾವ ಸಮಾಜದಲ್ಲಿಹಗಲುರಾತ್ರಿ ಶ್ರಮಪಡುವವರ ಸ್ಥಿತಿ ಇತರರದ್ದಕ್ಕಿಂತ ಹೆಚ್ಚೇನುಚೆನ್ನಾಗಿರಲಿಲ್ಲವೋ, ಎಲ್ಲ ರೈತರದೌರ್ಬಲ್ಯಗಳಿಂದ ಲಾಭ ಪಡೆಯುವುದನ್ನು ಬಲ್ಲ ಜನ ಅವರೊಂದಿಗೆ ವ್ಯವಹಾರ ಮಾಡಿ ಅವರಿಂತ ಹೆಚ್ಚು ಶ್ರೀಮಂತರಾಗಿದ್ದಾರೋ ಅಲ್ಲಿ ಇಂತಹ ಮನೋವೃತ್ತಿ ಹುಟ್ಟುವುದು ಆಶ್ಚರ್ಯವೇನಲ್ಲ” ಹೆಂಡತಿ ಸತ್ತಾಗ ತಂದೆ ಮಗ ಇಬ್ಬರೂ ಶವಸಂಸ್ಕಾರಕ್ಕೆಂದು ಎತ್ತಿದ ಹಣವನ್ನೇ ತಿನ್ನಬೇಕಾದ ಪ್ರಸಂಗ ಬರುತ್ತದೋ ಅಲ್ಲಿ ಒಟ್ಟು ಇಡೀ ಪರಿಸರದಲ್ಲಿ ಸಮಸ್ಯೆಯನ್ನಿಟ್ಟು ನೋಡುವುದರಿಂದ ಪ್ರೇಮಚಂದರು ಮನುಷ್ಯನ ವೇದನೆಯನ್ನು ಆಳಕ್ಕೆ ಕೆದಕಿ ನೋಡುವ ಮಹಾ ಮಾನವತಾವಾದಿಯಾಗಿದ್ದಾರೆ. ಹಾಗಂತ ಕತೆಗಾರರು ಇಂತಹ ಪ್ರಸಂಗಗಳನ್ನು ಸಮರ್ಥಿಸಿಕೊಳ್ಳುವುದಿಲ್ಲ. ಆದರೆ ಮನುಷ್ಯ ಜನಾಂಗ ಮುಟ್ಟಿರುವ ಬರ್ಬರತೆಯನ್ನು ಚಿತ್ರಿಸುವಲ್ಲಿ ಸಮರ್ಥಶಾಲಿ ಲೇಖಕರಾಗುತ್ತಾರೆ.

ಭ್ರಮೆಗೊಂದು ಸರಳ ಪ್ರಶ್ನೆ ಕೇಳುವ ರಷೀದಾಜಹಾನ ಅವರ ‘ದೇವರೆಲ್ಲಿ’ ಕತೆ, ಪ್ರತಿಷ್ಠಿತ ಸಮಾಜದ ಹುಸಿಮೌಲ್ಯಗಳನ್ನು ವಿಡಂಬಿಸುವ ಬೀಷಮ್‌ಸಹಾನಿಯವರ ‘ಸಾಹೇಬ ಭೋಜನಕ್ಕೆ ಬಂದಾಗ’ ಕತೆ, ಶ್ರಮಜೀವಿಗಳ ಬದುಕನ್ನು ಚಿತ್ರಿಸುವ ಕೃಷನ್ ಚಂದರ್‌ರ ‘ಬಾವುಟವನ್ನು ಕೈಗಿತ್ತರು’ ಕತೆ, ಪ್ರೇಮದ ನಿರಂತರತೆಯನ್ನು ಸಾರುವ ಅಖ್ತರ್‌ಮೊಹಿ–ಉದ್‌ದೀನ್‌ರ ‘ಮಧುವಿನ ಪೋಷಾಕು’ ಕತೆ, ಕಲಾವಿದನ ನಿಷ್ಠೆಯನ್ನು ದಾಖಲೆಗೊಳಿಸುವ ಅಮೃತಾಪ್ರೀತಮ್‌ರ ‘ಹೆಣ್ಣು ಮತ್ತು ಮಧುಪಾತ್ರೆ’ ಮುಂತಾದ ಮನೋಜ್ಞವಾದ ಕತೆಗಳನ್ನು ಈ ಸಂಕಲನ ಒಳಗೊಂಡಿದೆ.

ಹರಿದು ತಿನ್ನುವ ದಾರಿದ್ರ್ಯದಲ್ಲಿಯೂ ಬದುಕಿನ ಅರ್ಥವಿಲ್ಲದ ಹಲವಾರು ಸಂಪ್ರದಾಯಗಳಿಗೆ ಅಂಟಿಕೊಂಡಿರುವ ಒಂದು ಜನಾಂಗದ ಜೀವನವನ್ನು ಸಮಗ್ರವಾಗಿ ಸೆರೆಹಿಡಿಯುವ ಕತೆ: ಅಣ್ಣಾಬಾವುಸಾಠೆಯವರ ‘ಬರಬಾದ್ಯಾ ಕಂಜಾರಿ’.

“ಜಾತಿಯನ್ನು, ಆಚಾರವನ್ನು ಯಾವುದೋ ಕಾರಣಕ್ಕಾಗಿ ತಾನೇ ಎಲ್ಲರೂ ಒಪ್ಪಿಕೊಂಡಿರೋದು... ಮನಃಪೂರ್ವಕವಾಗಿ... ಸತ್ಯಕ್ಕಾಗಿ ಒಪ್ಪಿಕೊಂಡಿದ್ದರೆ, ಅದು ಎಂದೋ ಬದಲಾಗುತ್ತಿತ್ತು. ಪ್ರತಿಯೊಬ್ಬರು ಅದನ್ನು ಕೇವಲ ನೆಪಕ್ಕಾಗಿಒಪ್ಪಿಕೊಂಡಿರೋದರಿಂದಲೇ ಅದು ಇನ್ನೂ ಉಳಿದುಕೊಂಡು ನನ್ನಂಥ ದರಿದ್ರರ ಕೊರಳನ್ನು ಹಿಚುಕ್ತಿದೆ”... ಜಾತಿಯ ಬಗ್ಗೆ ತುಂಬಾ ಸೂಕ್ಷ್ಮವಾದ ಮಾತುಗಳನ್ನು ಹೇಳಿಸುವ ಜಯಕಾಂತನ್‌ರ ಕತೆ “ಹಗಲು ಹೊತ್ತಿನ ಒಂದು ಪ್ಯಾಸೆಂಜರ್ ಗಾಡಿಯಲ್ಲಿ”. ಉತ್ತಮ ವ್ಯಕ್ತಿಚಿತ್ರವನ್ನು ಕಟ್ಟಿಕೊಡುವ ಕತೆಗಳು ಮುಲ್ಕರಾಜ್ ಆನಂದರ ಸುಳ್ಳುಗಾರ ಹಾಗೂ ಶಿವಶಂಕರ ಪಿಳ್ಳೆಯವರ ಕುರುಂಡನ ಸಂತೃಪ್ತಿ.

ವರ್ಗ ಸಮಾಜದಲ್ಲಿ ಮುರುಟಿಹೋಗಿರುವ ಮನುಷ್ಯ ಸಂಬಂಧಗಳನ್ನು ದಾಖಲಿಸುವ ಅಸ್ಪಖ್‌ಅಹ್ಮದ್‌ರ ‘ಗ್ಯಾಟೋ’ ಪಾಕಿಸ್ತಾನಿ ಕತೆ. ಖಾಸಗಿ ಒಡೆತನ ಸೃಷ್ಟಿಸಿರುವ ಸಂಕುಚಿತತೆ ಇನ್ನೊಬ್ಬರ ಬಗ್ಗೆ ಆಲೋಚಿಸುವುದಕ್ಕೂ ಅವಕಾಶ ಕೊಡುವುದಿಲ್ಲ.

ಒಂದು ಎಳೆಯ ಮಗುವನ್ನು ಎಷ್ಟು ಸುಲಭವಾಗಿ, ಲಘುವಾಗಿ ಫಾಸಿಗೊಳಿಸಿಬಿಡಬಹುದು. ನೀರು ಕುಡಿದಷ್ಟು ಸರಾಗವಾಗಿ. ಮನುಷ್ಯ ಸಮಾನತೆಯ ಸಂಬಂಧ ಸೃಷ್ಟಿಸಿಕೊಳ್ಳುವವರೆಗೂ ಎಲ್ಲ ದೇಶಗಳ, ಎಲ್ಲ ಕಾಲಕ್ಕೂ ಅನ್ವಯವಾಗುವ ಕತೆ. ಮಾನವೀಯತೆಗೆ ಸವಾಲುಹಾಕುವ ಪಾಕಿಸ್ತಾನದ ಸಾದತ್ ಹಸನ್‌ರ ಇನ್ನೊಂದು ಕತೆ ಹುತಾತ್ಮರನೂಮಾಡಿ...

ನೋವಿನ ನಡುವೆ ಅರಳುವ ಪ್ರೀತಿ, ಹಿಂಸೆ, ಹಸಿವು ಎಲ್ಲ ದೇಶಗಳಲ್ಲೂ ಒಂದೇ...ಎಂದು ಸಾರುವ ಬಂಗ್ಲಾದೇಶದ ಜಲರೇಖೆ ಕತೆ, ದರಿದ್ರ ಶಿಕ್ಷಣ EXPOSE ಮಾಡುವ ಶ್ರೀಲಂಕಾದ ಕತೆ, ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ ಎನ್ನುವುದನ್ನು ರೂಪಿಸುವ ನೇಪಾಳದ ಕತೆ ಹೆಸರಿಸ ತಕ್ಕಂತಹವು.

ಬರ್ಮಾ ದೇಶದ ಕತೆಯೊಂದಿದೆ.

ಹೀಗೆ ಭಾರತ ಹಾಗೂ ನೆರೆಹೊರೆಯ ರಾಷ್ಟ್ರದ ಕತೆಗಳನ್ನೊಳಗೊಂಡಿರುವ ಇಲ್ಲಿಯ ಕತೆಗಳು ಜನಸಮುದಾಯದ ಬವಣೆಯನ್ನು ಕಣ್ಣಿಗೆ ಕಟ್ಟುವಂತೆ ರೂಪಿಸುವಲ್ಲಿ ತುಂಬಾ ಯಶಸ್ವಿಯಾದ ಕತೆಗಳು.

ಸಂಕಲನಕ್ಕೆ ಶೀರ್ಷಿಕೆ ಹೊಂದಿರುವ ‘ಸುಭಾಷಿಣಿ’ ಕತೆ ರವೀಂದ್ರನಾಥ ಠಾಗೂರ್‌ರದು. ಈ ಸುಭಾ ಯಾವತ್ತು ಮಾತು ಆಡಲಾರಳು. ಪ್ರಧಾನಸಂಪಾದಕರು ಹೇಳುವಂತೆ ಭಾರತ ಮತ್ತು ನೆರೆ ಹೊರೆ ರಾಷ್ಟ್ರಗಳ ಬೃಹತ್ ಜನಸಮುದಾಯದ ಬಹುಭಾಗದ ಕಥೆ ಇದೇ.

ಒಟ್ಟು ಮೂಕ ಜನತೆಯ ಧ್ವನಿಯಾದ ಇಲ್ಲಿಯ ಕತೆಗಳು ಭಾರತದ ಹಾಗೂ ನೆರೆಹೊರೆಯ ಜನಜೀವನಕ್ಕೆ ಹಿಡಿದ ಸ್ಪಷ್ಟ ಕನ್ನಡಿಯಾಗಿದೆ.

- ಗುಡಿಹಳ್ಳಿ ನಾಗರಾಜ

ಮತಾಂಧತೆಯ ಬಗೆಗೆ ಜನತೆಗೊಂದು ಮಹಾಪಾಠ

(4ನೇ ಪುಟದಿಂದ)

ಧರ ಬಲಿಗೆ ಬೀಳಬಾರದು ಎಂದರೆ ಇರಾನಿನ ಘಟನಾವಳಿಗಳನ್ನು ನಾವು ನೆನಪಿಡಬೇಕಾಗಿದೆ.

ಇರಾನ್ನಿನ ಜಾತ್ಯಾತೀತ ಶಕ್ತಿಗಳಾದ ಕಮ್ಯುನಿಸ್ಟ್ ಗುಂಪುಗಳಲ್ಲಿ ಹೊಂದಾಣಿಕೆಯಿಲ್ಲವೆಂಬುದೂ ಕೂಡ ನಿಜ. ಆದರೆ ಅವರೆಲ್ಲ ಒಂದು ಐಕ್ಯದಿಂದ ಈ ಮತಾಂಧರನ್ನು ಎದುರಿಸುತ್ತಿರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಅಧಿಕಾರವನ್ನು ಅವರೇ ವಹಿಸಬೇಕಾದ ಸಂದರ್ಭ ಬಂದರೆ ಅವರು ಐಕ್ಯದಿಂದ ಜನತೆಯ ವಿಮೋಚನೆಗೆ ಹಾದಿ ಮಾಡಿಕೊಡಬಹುದೇ ಎಂಬುದನ್ನು ಕಾದುನೋಡಬೇಕಷ್ಟೆ. ಮತಾಂಧರು ಮತ್ತು ಕಮ್ಯುನಿಸ್ಟ್ ಸಂಘಟನೆಗಳ ನಡುವೆ ಇರಾನಿನಲ್ಲಿ ನಡೆಯುತ್ತಿರುವ ಕದನವು ಭಾರತದಲ್ಲೂ ಪ್ರತಿಧ್ವನಿಗೊಳ್ಳುತ್ತಿದೆ. ಭಾರತದಲ್ಲಿರುವ ಇರಾನದ ಕಮ್ಯುನಿಸ್ಟ್ ಬೆಂಬಲಿಗರನ್ನು ಇಸ್ಲಾಂ ಮತೀಯವಾದಿಗಳು ಹಿಂಸೆಗೊಳಪಡಿಸುತ್ತಿದ್ದಾರೆ. ಆಗಸ್ಟ್ 29, 1981ರಂದು ದೆಹಲಿಯಲ್ಲಿ ಮೊಜಾಹದೀಯನ್ ಪಕ್ಷದ ಬೆಂಬಲಿಗರು ಇರಾನದ ಆಳುಗರ ಕುಕೃತ್ಯದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಗ ಇಸ್ಲಾಂ ಮತಾಂಧರು ನಮ್ಮ ಪೋಲೀಸರೆದುರೇ ಅವರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ 30 ಜನರನ್ನು ಗಾಯಗೊಳಿಸಿದ್ದಾರೆ. ಧಾರವಾಡದಲ್ಲಿ ಅಂಥ ದಾಳಿ ನಡೆಯುತ್ತವೆಂದು ಸುದ್ದಿ ಬಂದಾಗ ಈ ಲೇಖಕನೂ ಕೂಡ ಇಸ್ಲಾಂ ಮತೀಯವಾದಿಗಳ ಬರವಿಗೆ ಫೇದಾಯಿಯನ್ ಗೆರಿಲ್ಲಾ ಸಂಘಟನೆಯ ಬೆಂಬಲಿಗರೊಂದಿಗೆ ದಿ. 3-9-81ರಂದು ದಾರಿಕಾಯ್ದು ನಿರಾಶನಾಗಿ ಬಂದವನೇ ದಾಳಿಯ ಸುದ್ದಿ ಬಂದಾಗ ಎಸ್. ಎಫ್. ಐ.ನ ಸಹಾಯವನ್ನು ಇರಾನದ ಎಡ ಸಂಘಟನೆಗಳ ಮಿತ್ರರು ಯಾಚಿಸಿದರು. ಎಸ್. ಎಫ್. ಐ.ನ ಸಹಾಯ ಸಿಕ್ಕಿರುವುದನ್ನು ಕಂಡು ಮತೀಯವಾದಿಗಳು ಮರಳಿ ಸುಮ್ಮನೇ ಹೋಗಬೇಕಾದ ಪ್ರಸಂಗ ಬಂತು.

ಭಾರತದಲ್ಲಿ ನಡೆಯುವ ಈ ಮತೀಯವಾದಿಗಳ ಕುತಂತ್ರಗಳನ್ನು ಬಯಲಿಗೆಳೆಯಲು ಭಾರತದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಮುಂದೆ ಬರಬೇಕಾದ ಅವಶ್ಯಕತೆ ಇದೆ. ಅತೀ ಕಷ್ಟದಲ್ಲಿ ಹೋರಾಟಮಾಡುತ್ತಿರುವ ಇರಾನದ ಜನತಾ ಕ್ರಾಂತಿಕಾರಿ ಶಕ್ತಿಗಳಿಗೆ ವಿಜಯದ ಹಾದಿಯನ್ನು ತೆರೆದಿಡಲು ನಾವೂ ನಮ್ಮ ಕೈಲಾದ ಸಹಾಯ ಮಾಡಬೇಕಾದ ಅವಶ್ಯಕತೆ ಇದೆ.

ಸೆಪ್ಟೆಂಬರ್ ೨೧ರಂದು ಸರಕಾರಿ ಕಛೇರಿಗಳೆದುರು ಧರಣಿ ಸತ್ಯಾಗ್ರಹ-ಪಿಕೆಟಿಂಗ್

ಬೀಡಿಕಾರ್ಮಿಕರಿಗೆ ಕನಿಷ್ಟ ವೇತನ ಜಾರಿಗೆ–ಹೋರಾಟಕ್ಕೆ ಕರೆ

ಬೀಡಿ ಹಾಗೂ ಇತರೆ ದಿನಕೂಲಿ ಕಾರ್ಮಿಕರಿಗೆ ಕನಿಷ್ಠ ವೇತನ ದಿನಕ್ಕೆ ರೂ. 12/– ರಂತೆ ನಿಗದಿಯಾಗಬೇಕೆಂದು ಜುಲೈ ಮೊದಲ ವಾರದಲ್ಲಿ ಹೈದರಾಬಾದ್‌ನಲ್ಲಿ ನಡೆದ ದಕ್ಷಿಣ ಭಾರತ ಕಾರ್ಮಿಕ ಸಂಘಟನೆಗಳ ಸಮಾವೇಶ ತೀರ್ಮಾನಿಸಿದೆ. ಕರ್ನಾಟಕ ಬೀಡಿಕಾರ್ಮಿಕರ ಫೆಡರೇಶನ್ (ಸಿ. ಐ. ಟಿ. ಯು.) ಕೇರಳ ರಾಜ್ಯದಲ್ಲಿ ಸಿಗುತ್ತಿರುವಂತೆ ಇಲ್ಲಿಯೂ ಒಂದು ಸಾವಿರ ಬೀಡಿಗಳನ್ನು ಕಟ್ಟುವ ಮಜೂರಿ ರೂ. 12/– ಆಗಬೇಕು, ಬೆಲೆಏರಿಕೆಗೆ ಅನುಸಾರವಾಗಿ ತುಟ್ಟಿಭತ್ಯೆ ಮತ್ತಿತರ ಸವಲತ್ತುಗಳಿಗಾಗಿ ಕಳೆದ ಒಂದು ವರ್ಷದಿಂದ ಸತತ ಹೋರಾಟ ನಡೆಸುತ್ತಿದೆ. ಈ ಹೋರಾಟಗಳ ಫಲವಾಗಿ ಜೂನ್ ತಿಂಗಳಲ್ಲಿ ತಾತ್ಕಾಲಿಕ ಪರಿಹಾರವಾಗಿ ಒಂದು ರೂಪಾಯಿ ಕೂಲಿಯ ಹೆಚ್ಚಳವನ್ನು ರಾಜ್ಯ ಬೀಡಿಕಾರ್ಮಿಕರು ಪಡೆದರು.

ನಂತರ ಸರಕಾರ ಕೂಲಿಯನ್ನು ನಿಗದಿಪಡಿಸುವುದಕ್ಕೆ ಸರಕಾರ, ಬೀಡಿ ಮಾಲೀಕರು ಹಾಗೂ ಕಾರ್ಮಿಕರ ಪ್ರತಿನಿಧಿಗಳನ್ನು ಒಳಗೊಂಡ ಒಂದು ಸಲಹಾ ಸಮಿತಿಯನ್ನು ನೇಮಿಸಿತು. ಆದರೆ ಇದುವರೆಗೂ ಸಲಹಾ ಸಮಿತಿ ಕೂಲಿಯ ಹೆಚ್ಚಳದ ಬಗ್ಗೆ ನ್ಯಾಯಯುತವಾದ ತೀರ್ಮಾನ ತೆಗೆದುಕೊಳ್ಳಲು ಆಗಿಲ್ಲ. ಕಾರಣ ಮಾಲೀಕರ

(6ನೇ ಪುಟ ನೋಡಿ)

ಅಧಿಕಾರಿಗಳಿಗೆ ಇಂದಿರಾ ಉಪದೇಶ

[3ನೇ ಪುಟದಿಂದ]

ಸಾಧಾರಣ ಈ ಸೂತ್ರವನ್ನೇ ಅನುಸರಿಸಿದ್ದರು. ಕಾರಣ ಮದ್ರಾಸ್-ಆಂಧ್ರ-ಒರಿಸ್ಸಾ ರಾಜ್ಯಗಳಲ್ಲಿ ಗಡಿ ತಂಟೆ ಉಳಿದಿಲ್ಲ.

1956ರಲ್ಲಿ ರಾಜ್ಯ ಪುನರ್ವಿಂಗಡ ನಾ ಕಾಯ್ದೆ ಲೋಕಸಭೆಯಲ್ಲಿ ಪಾಸಾಯಿತು. ಕಾಸರಗೋಡ ಮತ್ತಿನ್ನಿತರ ಗಡಿಪ್ರದೇಶಗಳನ್ನು ಕರ್ನಾಟಕ ಕಳೆದುಕೊಂಡಿತು. ಗಡಿಪ್ರದೇಶದ ಕೆಲವು ಮುಖಂಡರಲ್ಲದೆ ಬೇರೆಯವರು ತಾವು ಎದುರಿಸುತ್ತಿರುವ ಜೀವಂತ ಸಮಸ್ಯೆಗಳಲ್ಲೇ ಮಗ್ನರಾಗಿದ್ದರಲ್ಲದೆ ಕೆಲವು ಗಡಿಪ್ರದೇಶಗಳ ಕುರಿತು ತಂಟೆ ತೆಗೆಯಲು ಮುಂದಾಗಲಿಲ್ಲ. ಆದರೆ ಮಹಾರಾಷ್ಟ್ರದ ಮುಖಂಡರು ಸುಮ್ಮನಿರಲಿಲ್ಲ.

1966,ಮೇ 23ರಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಿದಾಗ, ಮಹಾರಾಷ್ಟ್ರ ಮುಖಂಡರ ಒತ್ತಾಯಕ್ಕೆ ಮಣಿದು, ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರು ಸದಸ್ಯರೆಲ್ಲ ದಣಿದು ಅರೆ ನಿದ್ರಾವಸ್ಥೆಯಲ್ಲಿದ್ದಾಗ ಮಧ್ಯರಾತ್ರಿಯಲ್ಲಿ ಏಕಸದಸ್ಯ ಆಯೋಗ ನೇಮಿಸುವ ನಿರ್ಧಾರ ಪ್ರಕಟಿಸಿದರು. ಭಾರತದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಮೆಹರಚಂದ ಮಹಾಜನ ಅವರನ್ನು 25-10-1966ರಂದು ಕೇಂದ್ರ ಸರಕಾರ ಆಯೋಗವಾಗಿ ನೇಮಿಸಿತು. ಇವರು 28-8-67ರಂದು ತಮ್ಮ ವರದಿಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿದರು.

ಮಹಾರಾಷ್ಟ್ರದ ಎಲ್ಲ ಮುಖಂಡರೂ ಏಕಕಂಠದಿಂದ ಆಯೋಗ ರಚನೆಯನ್ನು ಒಪ್ಪಿಕೊಂಡರು. ಕೇಂದ್ರ ಮಂತ್ರಿಗಳಾಗಿದ್ದ ಯಶವಂತರಾವ್ ಚವ್ಹಾಣರು ಆಯೋಗವು ನೀಡುವ ಯಾವುದೇ ನಿರ್ಣಯವನ್ನು ಉಭಯ ರಾಜ್ಯಗಳು ಅಂತಿಮ ತೀರ್ಮಾನವೆಂದು ಒಪ್ಪಿಕೊಳ್ಳಬೇಕೆಂದರು. ಹಾಗೆಯೇ ಆಗ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವಿ. ಪಿ. ನಾಯ್ಕ ಅವರು ಆಯೋಗ ನೀಡುವ ತೀರ್ಮಾನಕ್ಕೆ ಬದ್ಧರಿರುವುದಾಗಿ ಹೇಳಿದರಲ್ಲದೆ ಕೇಂದ್ರ ಸರಕಾರವೂ ಆಯೋಗವನ್ನು ಒಪ್ಪಿಕೊಳ್ಳಬೇಕೆಂದು ಹೇಳಿದರು.

ಕೇಂದ್ರದ ಕೈಗೆ ವರದಿಯು ಸೇರಿದ 2 ತಿಂಗಳುಕಾಲ ಅದು ಅಜ್ಞಾತವಾಸದಲ್ಲಿತ್ತು. ನಂತರ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಒತ್ತಾಯದ ಮೇರೆಗೆ 4-11-67ರಂದು ಆ ವರದಿ ಪ್ರಕಟವಾಯಿತು. ಕೂಡಲೇ ಮಹಾರಾಷ್ಟ್ರಾದ್ಯಂತ ಮುಷ್ಕರ, ಪ್ರತಿಭಟನೆ, ಗೂಂಡಾಗಿರಿ ನಡೆದವು. ಕನ್ನಡಿಗರ ಮೇಲೆ ಶಿವಸೇನೆಯ ಅಮಾನುಷ ಅತ್ಯಾಚಾರ ನಡೆಯಿತು. ಮಹಾರಾಷ್ಟ್ರದ ವಿಧಾನಸಭೆ ಈ ವರದಿಯನ್ನು ತಿರಸ್ಕರಿಸಿತು.

ಅನಂತರ ಮರ್ಕ್ಯುರಿ ಚಳಿಜ್ವರ ಬಂದಂತೆ ಕರ್ನಾಟಕದ ಮಹಾರಾಷ್ಟ್ರ ಏಕೀಕರಣ ಸಮಿತಿಯವರೂ, ಮುಂಬಯಿಯ ಶಿವಸೇನೆಯವರೂ ಗಡಿ ಪ್ರಶ್ನೆಯ ಗುಲ್ಲೆಬ್ಬಿಸುತ್ತಲೇ ಇದ್ದಾರೆ. ಅವರ ಗುಲ್ಲಿಗೆ ಹೂಗುಟ್ಟುತ್ತಾ ಬೆಂಗಳೂರಿನ ವಾಟಾಳ್ ನಾಗರಾಜ ಮತ್ತಿತರ ಕನ್ನಡ ಚಳುವಳಿಗಾರರು ಮಹಾಜನ ವರದಿ ಜಾರಿಯಲ್ಲಿ ಬರಬೇಕೆಂದು ಬೊಬ್ಬಿಡುತ್ತಿದ್ದಾರೆ.

ಮಹಾಜನ ವರದಿಗನುಸಾರ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಮಲೆನಾಡು ಪ್ರದೇಶ, ಬೆಳಗಾವಿ ತಾಲ್ಲೂಕಿನ ಪಶ್ಚಿಮ ಭಾಗ, ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಹಾಗೂ ಸುತ್ತಮುತ್ತಲಿನ ಪ್ರದೇಶ, ಲೋಂಡಾ, ಖಾನಾಪುರ ತಾಲ್ಲೂಕಿನ ನಂದಗಡ ಮತ್ತು ಖಾನಾಪುರ, ಅಲ್ಲದೇ ಅಪ್ಪರ್ ಮಲಪ್ರಭಾ, ತಟ್ಟಿಹಳ್ಳಾ, ಜಾನಕಟ್ಟಿ ಯೋಜನೆಗಳು, ರಕ್ಕಸಕೊಪ್ಪ, ಹಿಂಡಲಗ ಜೈಲು, ಬೆಳಗಾವಿಯ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಮಹಾರಾಷ್ಟ್ರಕ್ಕೆ ಸೇರುತ್ತದೆ.

ಜತ್ತ ತಾಲ್ಲೂಕಿನ 44 ಹಾಗೂ ಇತರ ಮಹಾರಾಷ್ಟ್ರ ಪ್ರದೇಶದ 249 ಹಳ್ಳಿಗಳು ಈ ಆಯೋಗದ ಶಿಫಾರಸಿನಂತೆ ಕರ್ನಾಟಕಕ್ಕೆ ಸೇರುತ್ತವೆ.

ಕಾಸರಗೋಡಿನ ವಿಷಯದಲ್ಲಿ ಈ ಆಯೋಗ ಏನೂ ಹೇಳಿಲ್ಲ.

ಗುತ್ತೇದಾರಿ ಬಂಡವಾಳದಾರ-ಭೂಮಾಲಕವರ್ಗದ ಪ್ರತಿನಿಧಿ ಇಂದಿರಾಗಾಂಧಿ ಆಳ್ವಿಕೆಯಲ್ಲಿ, ಬೆಲೆಯೇರಿಕೆ, ನಿರುದ್ಯೋಗ ಬಡತನ, ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳಂಥ ಭೀಕರ ಜೀವಂತ ಸಮಸ್ಯೆಗಳನ್ನೂ, ಮುಷ್ಕರ ಪ್ರತಿಬಂಧಕಾಜ್ಞೆ ನಾಗರೀಕ ಹಕ್ಕುಗಳ ಮೇಲೆ ಗಧಾಪ್ರಹಾರ, ಪೋಲೀಸ್ ದಬ್ಬಾಳಿಕೆ, ಮಹಿಳೆಯರ ಮಾನಭಂಗದಂತ ಹಲವಾರು ಪ್ರಶ್ನೆಗಳನ್ನೂ ಸಾರ್ವಜನಿಕರು ಎದುರಿಸುತ್ತಿರುವಾಗ, ಮಹಾಜನ ವರದಿ, ಗಡಿಸಮಸ್ಯೆಗಳಂಥ ಸತ್ತ ಸಮಸ್ಯೆಗಳ ಕುರಿತು ವಿಚಾರಮಾಡಲು ಕೂಡ ಸಾರ್ವಜನಿಕರಿಗೆ ವೇಳೆಯಿಲ್ಲದಂತಾಗಿರುವಾಗ, ಕೆಲವು ಸಂಕುಚಿತ ಭಾವನೆಯ ಮುಖಂಡರು, ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ದುರುದ್ದೇಶದಿಂದ ಮಾತ್ರ ವಿನಾಕಾರಣ ಇಂಥ ಗುಲ್ಲೆಬ್ಬಿಸುತ್ತಿದ್ದಾರೆ. ತನ್ನ ಗೃಹಕಲಹದ ಕೊಂಪೆಯಲ್ಲಿ ಸಿಕ್ಕಿಕೊಂಡ ಇಂದಿರಾಗಾಂಧಿಗೂ ಬಹುತೇಕ ಇದು ಬೇಡವಾದ ಸಮಸ್ಯೆಯಾಗಿರಬೇಕೆಂದು ಭಾವಿಸಿದರೆ ತಪ್ಪೇನಿಲ್ಲ.

●

ಸಿ. ಐ. ಟಿ. ಯು. ರಾಜ್ಯಸಮಿತಿಯ ಸಭೆಗಳ ತೀರ್ಮಾನಗಳು

ಹರಿಹರ ಸಮ್ಮೇಳನದಲ್ಲಿ ಚುನಾಯಿತವಾದ ರಾಜ್ಯಸಮಿತಿಯ ಮೊದಲನೆಯ ಸಭೆಯು ಬೆಂಗಳೂರಿನಲ್ಲಿ ತಾ. 15-8-81ರಂದು ನಡೆಯಿತು.

ಸಿ. ಪಿ. ಐ. ಮುಖಂಡ ಮತ್ತು ರಾಜ್ಯಸಭಾ ಸದಸ್ಯ ಕಾಂ. ಭೂಪೇಶ್ ಗುಪ್ತರ ನಿಧನದ ಬಗ್ಗೆ ಸಭೆಯು ಸಂತಾಪಸೂಚಕ ನಿರ್ಣಯವನ್ನು ಅಂಗೀಕರಿಸಿತು.

ಹರಿಹರ ಸಮ್ಮೇಳನದ ನಂತರ ಈವರೆಗಿನ ಘಟನಾವಳಿಗಳ ಬಗ್ಗೆ ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ವರದಿಯನ್ನು ಕೊಟ್ಟರು.

ಅಂತರರಾಷ್ಟ್ರೀಯ ಮತ್ತು ದೇಶದ ರಾಜಕೀಯ ಆರ್ಥಿಕ ಪರಿಸ್ಥಿತಿಯನ್ನು ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ವಿವರಿಸಿದರು.

ಜುಲೈ 12, 13ರಂದು ಹೈದರಾಬಾದಿನಲ್ಲಿ ನಡೆದ ದಕ್ಷಿಣ ವಲಯ ಕನಿಷ್ಟ ಕೂಲಿ ಸಮಾವೇಶದ ಬಗ್ಗೆ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ವರದಿ ಕೊಟ್ಟರು.

ಹನ್ನೆರಡು ಸಂಗಾತಿಗಳು ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದರು. ಪ್ರಧಾನಕಾರ್ಯದರ್ಶಿಯವರು ಚರ್ಚೆಗೆ ಉತ್ತರ ಕೊಟ್ಟನಂತರ ವರದಿ ಅಂಗೀಕಾರವಾಯಿತು.

ರಾಜ್ಯಸಮಿತಿಯ ನಿಧಿ ಸಂಗ್ರಹದ ಬಗ್ಗೆ ಚರ್ಚೆ ನಡೆದು ಜಿಲ್ಲಾಸಮಿತಿಗಳು ಮತ್ತು ಸಂಘಗಳು ತಮ್ಮ ಕೋಟಾದ ಅರ್ಧಭಾಗವನ್ನು ಅಕ್ಟೋಬರ್‌ನ ಒಳಗೆ ಉಳಿದರ್ಧವನ್ನು ಡಿಸೆಂಬರ್‌ನ ಒಳಗೆ ಕೊಡಬೇಕೆಂದು ತೀರ್ಮಾನವಾಯಿತು. ಬೆಂಗಳೂರು ಜಿಲ್ಲಾಸಮಿತಿಯು ಅರ್ಧ ಹಣವನ್ನು ಸೆಪ್ಟೆಂಬರ್‌ನಲ್ಲಿಯೂ ಉಳಿದರ್ಧವನ್ನು ಮುಂದಿನ ತಿಂಗಳುಗಳಲ್ಲಿ ಕೊಡಬೇಕೆಂದು ತೀರ್ಮಾನಿಸಲಾಯಿತು.

ಸಭೆಯು "ರಾಜಕೀಯ ಪರಿಸ್ಥಿತಿ"ಯನ್ನು ಕುರಿತು, ಅಗತ್ಯಸೇವಾ ನಿರ್ವಹಣೆಯ ಸುಗ್ರೀವಾಜ್ಞೆ', 'ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಗಳು', 'ಕನಿಷ್ಟ ಕೂಲಿ'ಯ ಮೇಲೆ, 'ಐ. ಎನ್. ಟಿ. ಯು.ಸಿ.ಯ ಎಫ್. ಎಂ. ಖಾನ್‌ರನ್ನು ಬಂಧಿಸಬೇಕು' ಎಂಬ ಹಾಗೂ 'ಕಾರ್ಮಿಕ ರಂಗದಲ್ಲಿ ನಡೆಯುತ್ತಿರುವ ಗೂಂಡಾಗಿರಿ', 'ನಗರದಲ್ಲಿ ಹಾಲಿನ ಸರಬರಾಜು' ಈ ವಿಷಯಗಳ ಮೇಲೆ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸೆಪ್ಟೆಂಬರ್ 6ರಂದು ಬೆಲೆಏರಿಕೆ ಮತ್ತು ಕೇಂದ್ರಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸಮಾವೇಶಕ್ಕೆ ಎಲ್ಲಾ ಸಂಘಗಳೂ ಪ್ರತಿನಿಧಿಗಳನ್ನು ಕಳುಹಿಸಬೇಕೆಂದೂ, ಸಮಾವೇಶವನ್ನು ಯಶಸ್ವಿಗೊಳಿಸಲು ಶ್ರಮಿಸಬೇಕೆಂದೂ ತೀರ್ಮಾನಿಸಲಾಯಿತು.

ರಾಜ್ಯಸಮಿತಿಯ ಎರಡನೆಯ ಸಭೆ ಬೆಂಗಳೂರಿನಲ್ಲಿ 5-9-1981ರಂದು ಮಧ್ಯಾಹ್ನ 12-00 ಘಂಟೆಗೆ ಪ್ರಾರಂಭವಾಯಿತು. ಆಗಸ್ಟ್ 21 ರಿಂದ 24ರ ವರೆಗೆ ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ 'ಬಾಲಿ'ಯಲ್ಲಿ ನಡೆದ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯ ಬಗ್ಗೆ ಕಾಂ. ಸಿ. ನಂಜುಂಡಪ್ಪನವರು ವರದಿಕೊಟ್ಟರು. ಆ ಸಭೆಯಲ್ಲಿ ಅಧ್ಯಕ್ಷ ಕಾಂ. ಬಿ.ಟಿ. ರಣದಿವೆಯವರು ಮಾಡಿದ ಭಾಷಣದ ಮುಖ್ಯಾಂಶಗಳನ್ನು ಕಾಂ. ಎಸ್. ಸೂರ್ಯನಾರಾಯಣರಾವ್ ವಿವರಿಸಿದರು. ಪ್ರಧಾನಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರು ಜನರಲ್ ಕೌನ್ಸಿಲ್ ಸಭೆಗೆಕೊಟ್ಟ ವರದಿಯನ್ನು ಕಾಂ. ಸಿ. ನಂಜುಂಡಪ್ಪನವರು ವಿವರಿಸುತ್ತಿದ್ದಾಗ, ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ಸದಸ್ಯರೂ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ಸದಸ್ಯರೂ ಆದ ಕಾಂ. ಎ. ಬಾಲಸುಬ್ರಹ್ಮಣ್ಯಂ ಮದರಾಸಿನಲ್ಲಿ ನಿಧನರಾದ ಸುದ್ದಿ ಸಭೆಯನ್ನು ತಲುಪಿತು.

ಸಭೆಯು ಅಗಲಿದ ಕಾಂ. ಎ. ಬಾಲಸುಬ್ರಮಣ್ಯಂರವರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಅಂಗೀಕರಿಸಿ, ಅವರ ಗೌರವಾರ್ಥವಾಗಿ ಸಭೆಯನ್ನು ಮುಂದೂಡಲಾಯಿತು.

ಮುಂದೂಡಲ್ಪಟ್ಟ ಸಭೆ 6-9-81ರ ಸಂಜೆ 6-30ರಿಂದ 8-30ರವರೆಗೆ ನಡೆಯಿತು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರ ವರದಿಯ ವಿವರಣೆಯನ್ನು ಕಾಂ. ಸಿ. ನಂಜುಂಡಪ್ಪನವರು ಮುಂದುವರೆಸಿ, ಮುಗಿಸಿದರು.

28-8-1981ರಂದು ನಡೆದ ಕನಿಷ್ಟ ಕೂಲಿಯ ಸಲಹಾ ಸಮಿತಿಯ ಸಭೆ ಮತ್ತು ಲೇಬರ್‌ವೆಲ್‌ಫೇರ್‌ಬೋರ್ಡ್ ಸಭೆಗಳ ಕಾರ್ಯಕಲಾಪಗಳ ಬಗ್ಗೆ ಕಾಂ. ಎಸ್. ಸೂರ್ಯನಾರಾಯಣರಾವ್ ವರದಿ ಮಾಡಿದರು.

ಮುಂಬಯಿ ಸಮಾವೇಶ ಹಾಗೂ ಬೆಂಗಳೂರು ಸಮಾವೇಶಗಳ ಕರೆಯ ಮೇರೆಗೆ ಜಿಲ್ಲಾ ಸಮಾವೇಶಗಳನ್ನು ನಡೆಸಲು ಸಿ. ಐ. ಟಿ. ಯು. ಸಂಘಗಳು ಕೂಡಲೇ ಉಪಕ್ರಮಿಸಬೇಕೆಂದೂ, ಅವರೆ "ಹಲವು ಜಿಲ್ಲೆಗಳನ್ನು ಒಟ್ಟಿಗೆ ಸೇರಿಸಿ ಪ್ರಾದೇಶಿಕ ಸಮಾವೇಶಗಳನ್ನು ನಡೆಸಕೂಡದೆಂದೂ ತೀರ್ಮಾನಿಸಲಾಯಿತು". ಆಗುತ್ತಿರುವ ಪ್ರಯತ್ನಗಳ ಬಗ್ಗೆ ರಾಜ್ಯ ಕೇಂದ್ರಕ್ಕೆ ಕೂಡಲೇ ವರದಿಗಳನ್ನು ಕಳುಹಿಸಬೇಕು.

25-8-1981ರಂದು ಬಾಲಿಯಲ್ಲಿ ನಡೆದ 'ಆಲ್ ಇಂಡಿಯಾ ಕೋ-ಆರ್ಡಿನೇಷನ್ ಕಮಿಟಿ ಆಫ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ಸ್' ಸಭೆಯ ಬಗ್ಗೆ ಕಾಂ. ಎಸ್. ಸೂರ್ಯನಾರಾಯಣರಾವ್ 'ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಷನ್ನಿನ' ಕಾರ್ಯಕಾರಿ ಸಮಿತಿಯ ಸಭೆಯ ಬಗ್ಗೆ ಕಾಂ. ಕೆ. ಮೂಸಬ್ಬ, 'ಆಲ್ ಇಂಡಿಯಾ ಪ್ಲಾಂಟೇಷನ್‌ವರ್ಕರ್ಸ್ ಫೆಡರೇಷನ್ನಿ'ನ ಕಾರ್ಯಕಾರಿ ಸಮಿತಿಯ ಬಗ್ಗೆ ಕಾಂ. ಸಿ. ನಂಜುಂಡಪ್ಪನವರು ವರದಿಗಳನ್ನು ಕೊಟ್ಟರು.

ಕನಿಷ್ಟ ಕೂಲಿಯ ಬಗ್ಗೆ ಸರ್ಕಾರವನ್ನು ಒತ್ತಾಯಪಡಿಸಲು 21-9-81 ಬೀಡಿಕಾರ್ಮಿಕರು ಸರ್ಕಾರಿ ಕಚೇರಿಗಳ ಮುಂದೆ (ಜಿಲ್ಲಾಧಿಕಾರಿ, ತಹಶೀಲ್ದಾರ್) ಸಾಮೂಹಿಕ ಸತ್ಯಾಗ್ರಹವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

●

ಕನಿಷ್ಟ ವೇತನ ಜಾರಿಗೆ–ಹೋರಾಟಕ್ಕೆ ಕರೆ

[5ನೇ ಪುಟದಿಂದ]

ಪ್ರತಿನಿಧಿಗಳ ಹಟಮಾರಿತನದ ಧೋರಣೆ. ಈ ಮಧ್ಯೆ ಕೇಂದ್ರ ಸರಕಾರ ರಾಜ್ಯಗಳ ಕಾರ್ಮಿಕ ಮಂತ್ರಿಗಳ ಸಭೆ ಕರೆದು ಕೂಲಿಯನ್ನು ರೂ.7/- ಮತ್ತು ರೂ. 8/- ರ ನಡುವೆ ನಿಗದಿಮಾಡುವ ಸಲಹೆ ನೀಡಿದೆ. ಇದಕ್ಕೆ ಕರ್ನಾಟಕದ ಕಾರ್ಮಿಕ ಮಂತ್ರಿಗಳೂ ಒಪ್ಪಿಗೆ ನೀಡಿದ್ದಾರೆ ಇವರಿಂದಾಗಿ ಬೀಡಿಕಾರ್ಮಿಕರು ಕೇಂದ್ರ ಅಥವಾ ರಾಜ್ಯ ಸರಕಾರದ ಮೇಲೆ ಯಾವುದೇ ಭರವಸೆಯನ್ನು ಇಟ್ಟುಕೊಳ್ಳದೆ, ತಮ್ಮ ಸಂಘಟನೆ ಮತ್ತು ಹೋರಾಟದಲ್ಲಿ ಮಾತ್ರ ನಂಬಿಕೆ ಇಟ್ಟುಕೊಳ್ಳಬೇಕಾಗಿದೆ.

ಮೇಲ್ಕಾಣಿಸಿದಸಂಗತಿಗಳನ್ನು ಗಮನದಲ್ಲಿ ಇಟ್ಟು ರಾಜ್ಯ ಬೀಡಿಕಾರ್ಮಿಕರ ಫೆಡರೇಷನ್(ಸಿ. ಐ. ಟಿ. ಯು)ಸೆಪ್ಟೆಂಬರ್ 21ರಂದು ರಾಜ್ಯದಾದ್ಯಂತ ಸರಕಾರಿ ಕಛೇರಿಗಳ ಮುಂದೆಧರಣಿ ಸತ್ಯಾಗ್ರಹ, ಪಿಕೆಟಿಂಗ್, ಮೆರವಣಿಗೆಗಳನ್ನು ನಡೆಸಿ, ಮನವಿಪತ್ರಗಳನ್ನು ಸಲ್ಲಿಸಬೇಕೆಂದು ತೀರ್ಮಾನಿಸಿದೆ. ಬೀಡಿಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳು ಈಡೇರದಿದ್ದಲ್ಲಿ ಉಗ್ರ ಹೋರಾಟಕ್ಕೆ ಕಾರ್ಮಿಕವರ್ಗ ಸಿದ್ಧವೆಂಬುದನ್ನು ಈ ಸಂದರ್ಭದಲ್ಲಿ ಸಾಬೀತುಗೊಳಿಸಬೇಕು. ಆದ್ದರಿಂದ ರಾಜ್ಯದ ಬೀಡಿಕಾರ್ಮಿಕರು ಹೋರಾಟವನ್ನು ಸರ್ವರೀತಿಯಲ್ಲೂ ಯಶಸ್ವಿಗೊಳಿಸಬೇಕಾಗಿ ರಾಜ್ಯಬೀಡಿ ಫೆಡರೇಷನ್‌ನ ಕಾರ್ಯದರ್ಶಿ ಕಾಂ. ಮುಹಮ್ಮದ್ ದಸ್ತಗೀರ ವಿನಂತಿಸಿದ್ದಾರೆ.

●

ರೇಷ್ಮೆ ಬೆಳೆಗಾರರ ಸಮ್ಮೇಳನ

ಕೋಲಾರ ಜಿಲ್ಲಾ ರೈತರ ಆರ್ಥಿಕ ಜೀವನಾಡಿಯಾದ ರೇಷ್ಮೆ ಬೆಳೆಗೆ ಊಜಿನೊಣದ ಹಾವಳಿಯಿಂದ ಇಡೀ ರೇಷ್ಮೆ ಉದ್ದಿಮೆ ಹಾಳಾಗುವ ಪರಿಸ್ಥಿತಿ ಬಂದೊದಗಿದೆ. ಈ ಕುರಿತು ಕೋಲಾರ ಜಿಲ್ಲಾ ರೈತಸಂಘವು ಸರಕಾರದ ಗಮನಸೆಳೆಯುವ ಉದ್ದೇಶದಿಂದ ಹಾಗೂ ಊಜಿನೊಣದ ತೊಂದರೆಗೆ ಪರಿಹಾರ ಕಂಡುಹಿಡಿಯುವ ಉದ್ದೇಶದಿಂದ 29-8-81ರಂದು ಚಿಂತಾಮಣಿಯ ವಾಸವಿ ಕಲ್ಯಾಣ ಮಂದಿರದಲ್ಲಿ ಜಿಲ್ಲಾ ರೇಷ್ಮೆ ಬೆಳೆಗಾರರ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು.

ಜಿಲ್ಲೆಯ ನಾನಾ ಕಡೆಗಳಿಂದ ಬಂದ ಪ್ರತಿನಿಧಿಗಳನ್ನು ಕಾಂ. ಕೆ. ಎಂ. ವೆಂಕಟೇಶ್‌ರು ಸ್ವಾಗತಿಸಿದರು.

ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಮುಂಗವಾಳಪ್ಪ, ಕೋಲಾರ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಜಿ. ಪಾಪಣ್ಣ, ಕೋಲಾರ ಜಿಲ್ಲಾ ರೈತಮುಖಂಡ ಕಾಂ. ಎಸ್. ಲಕ್ಷ್ಮಯ್ಯ, ಪ್ರಾಂತ ರೈತಸಂಘದ ಮುಖಂಡ ಕಾಂ. ಪಿ. ಜಗನ್ನಾಥ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಜಿ. ದೊರೆಸ್ವಾಮಿಯವರು ಅಧ್ಯಕ್ಷ ಮಂಡಳಿಯಲ್ಲಿದ್ದರು.

ಆರಂಭದಲ್ಲಿ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ ವರದಿ ಸಲ್ಲಿಸಿದರು. ಅನೇಕ ಪ್ರತಿನಿಧಿಗಳು ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿಸಲಹೆ, ಸೂಚನೆಗಳನ್ನು ನೀಡಿದರು.

ಸಮ್ಮೇಳನವು ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು.

1. ಸರ್ಕಾರ ರೇಷ್ಮೆ ಬೆಳೆಗಾರರಿಗೆ ರೋಗರಹಿತ ಬಿತ್ತನೆ ಮೊಟ್ಟೆಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸಬೇಕು.

2. ಒಂದು ಎಕರೆಗೆ ಒಳಪಟ್ಟಿರುವ ನೇರಳೆ ಬೆಳೆಗಾರರಿಗೆ ವೈಜ್ಞಾನಿಕ ರೀತಿಯಲ್ಲಿ ಅಂಟೀಂಬರ್ ಸಾಮೂಹಿಕ ರೇಷ್ಮೆಹುಳುಗಳ ಸಾಕಾಣಿಕೆಯ ಕೇಂದ್ರಗಳನ್ನು ರೇಷ್ಮೆ ಬೆಳೆಗಾರರ ಪ್ರಮಾಣಕ್ಕನುಸಾರವಾಗಿ ಸರ್ಕಾರವೇ ಕಟ್ಟಿಸಿ ಇವುಗಳ ಮೇಲ್ವಿಚಾರಣೆ (ಸಾಮೂಹಿಕ ಜಾಕಿ ಸಾಕಾಣಿಕೆ ಕೇಂದ್ರಗಳ ರೀತ್ಯ) ಸರ್ಕಾರಕ್ಕೆ ಒಳಪಟ್ಟಿರಬೇಕು.

3. ಒಂದು ಎಕರೆಗೆ ಮೇಲ್ಪಟ್ಟು ಹಿಪ್ಪುನೇರಳೆ ಬೆಳೆಗಳಿಗೆ ಸರ್ಕಾರ ಬಡ್ಡಿರಹಿತವಾಗಿ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳಿಂದ ಇವರುಗಳ ಪ್ರಮಾಣಕ್ಕನುಸಾರವಾಗಿ ಸಾಲವನ್ನು ಒದಗಿಸುವುದು. ರೇಷ್ಮೆ ಇಲಾಖೆ ಕೊಡುವ ಪಾಸ್ ಪುಸ್ತಕಗಳ ಆಧಾರದ ಮೇಲೆ ಸಾಲ ಒದಗಿಸಿ ಹದಿನೈದು ವರ್ಷಗಳಲ್ಲಿ ಮರುಪಾವತಿ ಮಾಡಲು ಅವಕಾಶ ನೀಡಬೇಕು.

4. ಊಜಿನೊಣ ನಿಯಂತ್ರಿಸಲು ಕಂಟ್ರಾಕ್ಟ್‌ದಾರರ ಮುಖಾಂತರ ಹಾಕಿಸುತ್ತಿರುವ ತಂತಿಬಲೆಯನ್ನು ತಪ್ಪಿಸಿ ನೇರವಾಗಿ ಇದಕ್ಕೆ ತಗಲುವ ಖರ್ಚು ಮತ್ತು ತಂತಿಯನ್ನು ರೇಷ್ಮೆ ಬೆಳೆಗಾರರಿಗೆ ಒದಗಿಸಿ ಇವರ ಮೇಲೆ ಆಗುವ ಹೆಚ್ಚಿನ ಹೊರೆ ತಗ್ಗಿಸಬೇಕು.

5. ಕೇಂದ್ರ ಸರಕಾರದಿಂದ ಊಜಿನೊಣ ಹಾವಳಿಗೆ ತುತ್ತಾದ ರೈತರಿಗೆ ಪರಿಹಾರಧನವನ್ನು ಒದಗಿಸುವುದಾಗಿ ರಾಜ್ಯಸರ್ಕಾರ ಆಶ್ವಾಸನೆ ನೀಡಿತು. ಆದರೆ ಇಲ್ಲಿಯವರೆಗೂ ಪರಿಹಾರ ಧನವನ್ನು ನೀಡಲಿಲ್ಲ. ಇದರ ಬದಲು ಸರ್ಕಾರದವರು ಸಾಲದ ರೂಪದಲ್ಲಿ ತಂತಿಬಲೆಯನ್ನು ಹಾಕಿಸಿ ನಾಲ್ಕು ಕಂತುಗಳಲ್ಲಿ ಈ ಹಣವನ್ನು ಮರುಪಾವತಿ ಮಾಡಲು ಸರ್ಕಾರ ತೀರ್ಮಾನಿಸಿದೆ. ಇದನ್ನು ರದ್ದುಪಡಿಸಿ ಈ ಸಾಲವನ್ನು ಊಜಿನೊಣ ಹಾವಳಿಯ ಪರಿಹಾರಧನವಾಗಿ ಪರಿಗಣಿಸಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ.

6. ರೇಷ್ಮೆಗೂಡಿನ ಮಾರ್ಕೆಟ್ಟುಗಳಲ್ಲಿ ಹಾಟ್ ಹೇರ್‌ಡ್ರೈಯರ್‌ಗಳನ್ನು ತಕ್ಷಣ ಅಳವಡಿಸಿ ಗೂಡುಗಳನ್ನು ಹಬೆಗೆ ಒಳಪಡಿಸಬೇಕು ಮತ್ತು ನೂಲು ಹೆಚ್ಚುವವರಿಗೆ ಸುಲಭ ಕಂತುಗಳಲ್ಲಿ ಹಾಟ್ ಏರ್‌ಗಳನ್ನು ಒದಗಿಸುವುದು.

7. ಊಜಿ ನೊಣಗಳನ್ನು ಆರಿಸಿ ಸಂಬಂಧಪಟ್ಟ ಗ್ರಾಮಾಂತರ ಅಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ತಂದುಕೊಡುವ ಇವುಗಳ ನಾಶಕ್ಕೆ ವ್ಯವಸ್ಥೆ ಮಾಡಿಕೊಡುವವರಿಗೆ ಪ್ರಮಾಣಕ್ಕನುಸಾರವಾಗಿ ಹಣ ಕೊಡಲು ವ್ಯವಸ್ಥೆಮಾಡಿದರೆ ಇದಕ್ಕೆ ಆಕರ್ಷಿತರಾಗಿ ಬಹಳ ಜನ ಇದಕ್ಕೆ ಮುಂದೆ ಬರುತ್ತಾರೆ. ಆದ್ದರಿಂದ ಈ ಆಜ್ಞೆಯನ್ನು ತಕ್ಷಣ ಹೊರಡಿಸಬೇಕು.

8. ಪಕ್ಕದ ರಾಜ್ಯದ ರೈತರು ನಮ್ಮ ಮಾರುಕಟ್ಟೆಗೆ ರೇಷ್ಮೆಗೂಡುಗಳನ್ನು ಮಾರುವುದಕ್ಕೆ ತಂದರೆ ಅವರ ಹತ್ತಿರ ಕಾನೂನುಬಾಹಿರವಾಗಿ ಅಧಿಕಾರಿಗಳು ಯಾವ ರಶೀತಿಯೂ ಕೊಡದೇ ಲಾಟ್ ಒಂದಕ್ಕೆ 50-00 ರೂಪಾಯಿಗಳನ್ನು ವಸೂಲಿ ಮಾಡುವುದನ್ನು ಖಂಡಿಸುತ್ತದೆ. ಅವರಿಗೆ ಯಾವ ರೀತಿಯ ಕರವನ್ನು ವಿಧಿಸದೇ ಹೆಚ್ಚು ಗೂಡು ಮಾರುಕಟ್ಟೆಗಳಿಗೆ ತೆಗೆದುಕೊಂಡು ಬರುವಂತೆ ಉತ್ತೇಜನ ನೀಡಬೇಕೆಂದು ಸಭೆಯು ಒತ್ತಾಯಿಸುತ್ತದೆ.

9. ಊಜಿ ನೊಣದ ಹಾವಳಿ ತಪ್ಪಿಸಬೇಕೆಂದರೆ ಅದನ್ನು ನಾಶಪಡಿಸಬಲ್ಲ ಪರಾವಲಂಭಿ ಕೀಟಗಳನ್ನು ಶೋಧಿಸುವುದಕ್ಕೆ ಸರ್ಕಾರದವರು ವಿಶೇಷ ಗಮನಹರಿಸಿ ರೇಷ್ಮೆ ಇಲಾಖೆಗೆ ವಿಜ್ಞಾನಿಗಳ ತಂಡವೊಂದನ್ನು ನೇಮಿಸಿ ತಕ್ಷಣ ಸಂಶೋಧನೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ.

ವಿವಿಧ ಸಂಘಸಂಸ್ಥೆಗಳಿಂದ ಶುಭಾಶಯ ಸಂದೇಶಗಳು ಬಂದಿದ್ದವು.

ಕೊನೆಯಲ್ಲಿ ಕಾಂ. ಶ್ರೀನಿವಾಸ ರೆಡ್ಡಿ ವಂದನಾರ್ಪಣೆ ಮಾಡಿದರು. ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳಿಗೆ ದಿಗವಪಲ್ಲಿಯ ಕಾಂ. ಮುನೇಗೌಡರು ಉಪಹಾರ ನೀಡಿದ್ದರು.

○

ಭೂಮಿಗಾಗಿ ದಲಿತರ ಹೋರಾಟ

ದೇಶಕ್ಕೆ ಸ್ವಾತಂತ್ರ್ಯ ಬಂದು 34 ವರ್ಷ ಕಳೆದಿದ್ದರೂ ಜನತೆಯ ಆಶೋತ್ತರಗಳನ್ನು ಈಡೇರಿಸಲು ನಮ್ಮನ್ನಾಳುತ್ತಿರುವ ಸರಕಾರಕ್ಕೆ ಸಾಧ್ಯವಾಗಿಲ್ಲ. ಈ ಸರಕಾರಗಳು ಭೂಮಾಲೀಕ-ಬಂಡವಾಳಶಾಹಿ ಧೋರಣೆಗಳನ್ನನುಸರಿಸುತ್ತಿರುವುದೇ ಇದಕ್ಕೆ ಕಾರಣ.

“ಉಳುವವನೇ ಹೊಲದೊಡೆಯ” ಈ ಬೋಗಸ್ ಘೋಷಣೆಯನ್ನು ಕಾಂಗ್ರೆಸ್ ಸರಕಾರಗಳು ಬೊಗಳುತ್ತಲೇ ಬಂದಿವೆ. ಕಾರ್ಯತಃ ಉಳುವವರೇ ಜಮೀನಿನ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲೆತ್ನಿಸಿದರೆ ಪೋಲೀಸ್ ಬಲದಿಂದ ಅವರ ಮೇಲೆ ಮರ್ದನ ಆರಂಭವಾಗುತ್ತದೆ. ಇದಕ್ಕೆ ಸಾಕ್ಷಿಯಾಗಿ ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ನಡೆದಿರುವ ಘಟನೆಗಳೇ ಸಾಕ್ಷಿ.

ಗಂಗಾವತಿ ತಾಲ್ಲೂಕಿನ ಹಿರೇಜಂತಕಲ್ ಗ್ರಾಮದ 34 ದಲಿತ ಕುಟುಂಬಗಳು 1957ರಿಂದಲೂ ವಿರುಪಾಪುರ ಗ್ರಾಮದ ರಾಮಲಿಂಗನ ಕೆರೆಯನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಸಾಗುವಳಿಪಟ್ಟಾ ಕೊಡಬೇಕೆಂದು ಅನೇಕ ವರ್ಷಗಳಿಂದ ಸರಕಾರಕ್ಕೆ ಮನವಿ ಸಲ್ಲಿಸಿದ್ದರೂ ಸರಕಾರ ಕಿವಿಗೊಟ್ಟಿಲ್ಲ.

ಇದೇ ತಾಲ್ಲೂಕಿನ ಕನಕಗಿರಿಯ ದಲಿತರದ್ದು ಇನ್ನೊಂದು ನಿದರ್ಶನ. ಕನಕಗಿರಿಯ 30 ದಲಿತ ಕುಟುಂಬಗಳು 1960ರಿಂದ ತಿಪ್ಪನಾಳ ಕೆರೆಯನ್ನು ಫಲವತ್ತಾಗಿ ಮಾರ್ಪಡಿಸಿ ಸುಮಾರು 10 ವರ್ಷ ಸಾಗುವಳಿ ಮಾಡಿದ್ದರು. ಫಲವತ್ತಾದ ಈ ಜಮೀನಿನ ಮೇಲೆ ಕನಕಗಿರಿಯ ಜಮೀನ್ದಾರರ ಕೆಂಗಣ್ಣು ಬಿದ್ದಿತು. ಪರಿಣಾಮವಾಗಿ ಜಮೀನಿನಿಂದ ಪೋಲೀಸರ ನೆರವಿನಿಂದ ದಲಿತರನ್ನು ಹೊರಗಟ್ಟಲಾಯಿತು. ಕಂಗೆಟ್ಟ ದಲಿತರ ನೆರವಿಗೆ ಸರಕಾರ ಬರಲೇ ಇಲ್ಲ. ಏಕೆಂದರೆ ದಲಿತೋದ್ಧಾರಮುಂತಾದ ಘೋಷಣೆ ಕೊಡುವುದಕ್ಕೆ ಮಾತ್ರ ಅದಕ್ಕೆ ಸಾಧ್ಯ.

ಕಂಗೆಟ್ಟ ರೈತರು ಗಂಗಾವತಿ ತಾಲ್ಲೂಕಿನ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಹೋರಾಟಕ್ಕಿಳಿದಿದ್ದಾರೆ. ಸಾಗುವಳಿ ಮಾಡುತ್ತಿದ್ದ ದಲಿತರಿಗೇ ಜಮೀನಿನ ಮಾಲೀಕತ್ವವನ್ನು ಕೊಡಬೇಕೆಂದು ಒತ್ತಾಯಿಸಿ 5-9-81ರಿಂದ ಗಂಗಾವತಿಯಲ್ಲಿ ತಹಸೀಲ್ದಾರರ ಕಛೇರಿ ಎದುರು ಉಪವಾಸ ಸತ್ಯಾಗ್ರಹ ಆರಂಭವಾಗಿದೆ.

●

ಬೀದರ್‌ನಲ್ಲಿ ಎಸ್.ಎಫ್.ಐ. ಸಭೆ

ದಿನಾಂಕ 13-9-1981ರಂದು ಬೀದರದಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ವತಿಯಿಂದ ಸಭೆಯನ್ನು ಸೇರಿಸಲಾಯಿತು.

ಈ ಸಭೆಯಲ್ಲಿ ಬೀದರ ಜಿಲ್ಲಾ ಮಟ್ಟದ ಎಸ್. ಎಫ್. ಐ.ನ ಘಟಕವನ್ನು ರಚಿಸಲಾಯಿತು. ಸಭೆಯಲ್ಲಿ ಎಸ್. ಎಫ್. ಐ.ನ ಸಂಚಾಲಕ ಹೊನ್ನಾ ದತ್ತು ಅವರು ಎಸ್. ಎಫ್. ಐ. ಕುರಿತು ಮಾತನಾಡಿದರು.

ಈ ಸಭೆಗೆ ಎಲ್ಲಾ ಶಾಲಾ-ಕಾಲೇಜು ಮಟ್ಟದ ವಿದ್ಯಾರ್ಥಿಗಳು ಬಂದು ಭಾಗವಹಿಸಿದರು. ಸಭೆಯಲ್ಲಿ ಇಂದಿನ ವಿದ್ಯಾರ್ಥಿಗಳ ಸಮಸ್ಯೆಯನ್ನು ಕುರಿತು ಚರ್ಚೆಮಾಡಲಾಯಿತು.

ಬೀದರ ಜಿಲ್ಲಾಮಟ್ಟದ ಎಸ್. ಎಫ್. ಐ. ಘಟಕಕ್ಕೆ ಒಬ್ಬ ಸಂಚಾಲಕರನ್ನಾಗಿ ಮತ್ತು ಹದಿನೇಳು ಜನರನ್ನು ಸದಸ್ಯರನ್ನಾಗಿ ಆಯ್ಕೆಮಾಡಲಾಯಿತು.

●

ಬಂಡಾಯ ಸಾಹಿತ್ಯ ಸಮ್ಮೇಳನ

ದಿನಾಂಕ 13-9-81ನೇ ಭಾನುವಾರ ಇಲ್ಲಿನ ಮಹಿಳಾ ಸಮಾಜದಲ್ಲಿ ತಾಲ್ಲೂಕು ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು. ಸಮ್ಮೇಳನಕ್ಕೆ ಜಯಶೇಖರ ಅರಳು ಮಲ್ಲಿಗೆಯವರು ಎಲ್ಲರ ಸ್ವಾಗತ ಬಯಸಿದರು. ಸಮ್ಮೇಳನದ ಉದ್ಘಾಟನೆಯನ್ನು ಟಿ. ಎನ್. ಬಾಲಾಜಿ ನೆರವೇರಿಸಿದರು. “ಪ್ರಸಕ್ತ ರಾಜಕೀಯ ಸಂಗತಿ” ಬಗ್ಗೆ ವಿಚಾರ ಗೋಷ್ಠಿ ಅಧ್ಯಕ್ಷತೆಯನ್ನು ಹೆಚ್. ಆರ್. ಜಗದೀಶ ವಹಿಸಿದ್ದರು. ಕವಿಗೋಷ್ಠಿ ಅಧ್ಯಕ್ಷತೆಯನ್ನು ಅಶ್ವತ್ಥರೆಡ್ಡಿ ವಹಿಸಿದ್ದರು. ಹೊಸೂರು ಸತ್ಯಕುಮಾರ್ ಯುವ ಕವಿಗಳ ಪರಿಚಯ ಮಾಡಿದರು. ಎಂ. ಅಂಜನಪ್ಪ ಕೋಡಿಹಳ್ಳಿ ಅವರು ವಂದನಾರ್ಪಣೆ ಮಾಡಿದರು.

“ವಿಚಾರಗೋಷ್ಠಿ”ಯಲ್ಲಿ – ಭಾರತೀಯ ರಾಜಕಾರಣ, ನಮಗೆಂತಹ ವಿದ್ಯಾಭ್ಯಾಸ ಬೇಕು, ಪಕ್ಷಾಂತರ ಹಾಗೂ ರಾಜಕೀಯ, ಕೋಮುವಾದಿ ರಾಜಕಾರಣಿಗಳ ವಿಷಜಾಲ, ನಮಗೆಂತಹ ರಾಜಕೀಯ ವ್ಯವಸ್ಥೆ ಬೇಕು, ಶೋಷಿತರನ್ನು ಸದೆಬಡಿಯುತ್ತಿರುವ ರಾಜಕೀಯ ವ್ಯವಸ್ಥೆ, ಮಹಿಳೆಯ ಮೇಲಿನ ಶೋಷಣೆ ಇವುಗಳ ಬಗ್ಗೆ ಚಂದ್ರ ತೇಜಸ್ವಿ, ಎ. ವೆಂಕಟಸ್ವಾಮಿ, ಅಶ್ವತ್ಥರೆಡ್ಡಿ, ಸತ್ಯಕುಮಾರ್, ಮ. ಕೃಷ್ಣಮೂರ್ತಿ, ರೇಣುಕಾರಾಧ್ಯ, ಪ್ರಭಾದೇನಾಶ್ರೀ ತಮ್ಮ ಪ್ರಬಂಧಗಳನ್ನು ಮಂಡಿಸಿದರು.

●

ದಲಿತ ಸಂಘರ್ಷ ಸಮಿತಿ ಸಭೆ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ 9-9-81ರಂದು ದ. ಸಂ. ಸ. ನೇತೃತ್ವದಲ್ಲಿ ಸಭೆ ನಡೆಯಿತು. ಮುಖ್ಯ ಅತಿಥಿಯಾಗಿ ದ.ಕ.ವಿಭಾಗ ಸಂಚಾಲಕರಾದ ಬಿ. ರಾಮಕೃಷ್ಣರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಗೋವಿಂದ ಅವರು ವಹಿಸಿದ್ದರು.

ಪ್ರಾಚೀನಕಾಲದಿಂದ ಆಚರಣೆಯಲ್ಲಿರುವ ವರ್ಣಾಶ್ರಮ ಪದ್ಧತಿಯನ್ನು ವಿವರಿಸಿದ ಕಾಂ. ರಾಮಕೃಷ್ಣರು, ಅಧಿಕಾರವನ್ನು ಮೇಲ್ವರ್ಗದವರ ಕೈಯಲ್ಲಿಟ್ಟುಕೊಳ್ಳಲು ಜಾತಿ ವ್ಯವಸ್ಥೆಯನ್ನು ಬಿತ್ತಲಾಯಿತು ಎಂದರು. ಯಾರಿಗೆ ಕನಿಷ್ಟ ಸೌಲಭ್ಯಗಳಿಲ್ಲವೋ, ಯಾರು ನಿರಂತರ ಅನ್ಯಾಯ, ಅತ್ಯಾಚಾರ, ಅವಮಾನಗಳಿಗೆ ಒಳಗಾಗಿರುವರೋ ಅವರೆಲ್ಲರೂ ದಲಿತರೇ. ಶೋಷಣೆಗೊಳಗಾದವರೆಲ್ಲ ಸೇರಿ ಬಂಡಾಯಕ್ಕೆ ಸಿದ್ಧವಾಗಬೇಕು ಎಂದರು.

ಆರಂಭದಲ್ಲಿ ವಿ. ಮಹಾಬಲ ಸ್ವಾಗತಿಸಿದರು. ನಂತರದಲ್ಲಿ ವಿ. ಬಿ. ನಾರಾಯಣ ಕುಮಾರರು ಸಂಚಾಲಕರಾಗುಳ್ಳ 10ಜನರ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು.

○

ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ;

ಭೂಸುಧಾರಣೆಯೇ ತಮ್ಮ ಸರ್ಕಾರದ ಸಾಧನೆ: ನಾಯನಾರ್

(1ನೇ ಪುಟದಿಂದ)

ಬೇಕೇ ಹೊರತು ಜನವಿರೋಧೀ ವೀಸಾ' ನಾಸದಂತಹ ಕಾನೂನುಗಳಲ್ಲ ಎಂದು ಕಾಂ. ನಾಯನಾರ್ ನುಡಿದರು.

ಶೇ. ೯೫ ರಷ್ಟು ಭೂಸುಧಾರಣೆ

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ರಾಜಕೀಯ ಪಕ್ಷಗಳ ನಾಯಕತ್ವದಲ್ಲಿರುವ ತಮ್ಮ ರಾಜ್ಯದಲ್ಲಿ ಭೂಸುಧಾರಣೆಯು ಶೇ. 95 ಭಾಗ ಮುಗಿದಿದೆ. ಇದರಿಂದಲೇ ಜಮೀನ್ದಾರಿ ವರ್ಗವಿಲ್ಲದ ಕೇರಳದಲ್ಲಿ ಹರಿಜನರ ಮತ್ತು ಆದಿವಾಸಿ ಜನರ ಮೇಲೆ ಕ್ರೂರ ಹಲ್ಲೆಗಳಾಗುತ್ತಿಲ್ಲ. ಮತಾಂತರದ ಮಾತೇ ನಮ್ಮಲ್ಲಿ ಹೊರಡದಿರುವುದಕ್ಕೆ ಭೂಸುಧಾರಣೆಯ ಯಶಸ್ಸೇ ಮುಖ್ಯ ಕಾರಣವೆಂದು ಸಿ. ಪಿ. ಐ. (ಎಂ) ನಾಯಕ ನಾಯನಾರ್ ಜನತೆಗೆ ವಿವರಿಸಿದರು.

ಪಂಡಿತ ನೆಹರು ಅವರು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿದ್ದ "ಭೂಸುಧಾರಣೆ" ಯೋಜನೆಯನ್ನು 5 ಯೋಜನೆಗಳ ನಂತರ (34ವರ್ಷ)ವೂ ಅನೇಕ ರಾಜ್ಯಸರ್ಕಾರಗಳು (ಪ. ಬಂಗಾಳ, ಕೇರಳ, ತ್ರಿಪುರ ಬಿಟ್ಟು) ಇನ್ನೂ ಪೂರೈಸದಿರುವುದು ನಾಚಿಕೆಗೇಡಿನ ಸಂಗತಿ ಎಂದು ಟೀಕಿಸಿದ ನಾಯನಾರ್ ಅವರು, ಭೂಸುಧಾರಣೆಯಲ್ಲಿ ದೇಶವನ್ನಾಳಿದ ಮತ್ತು ಆಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಮನಸ್ಸಿಲ್ಲ ಎಂದರು.

ಬೇಸಾಯಕೂಲಿಗಾರರಿಗೆ ಪೆನ್ಷನ್

ಜೀವನದುದ್ದಕ್ಕೂ ಬೇರೆಯವರ ಜಮೀನಿನಲ್ಲಿ ದುಡಿದು ಬಡವರಾಗೇ ಉಳಿಯುವ ಬೇಸಾಯ ಕೂಲಿಗಾರರಾದ 60 ವರ್ಷ ವಯಸ್ಸಾದ ವಯೋವೃದ್ಧರಿಗೆಲ್ಲಾ ತಿಂಗಳಿಗೆ 45 ರೂ. ನಿವೃತ್ತಿ ವೇತನವನ್ನು ತಮ್ಮ ಸರ್ಕಾರಕೊಟ್ಟಿದೆ. ಇದಕ್ಕೆ ಕಳೆದ ವರ್ಷ 12ಕೋಟಿ ರೂ. ಖರ್ಚಾಗಿದೆ. ಈ ವರ್ಷವೂ ನಿವೃತ್ತಿ ವೇತನ ಯೋಜನೆಯನ್ನು ಮುಂದುವರಿಸುವ ಮತ್ತು ವಿಸ್ತರಿಸುವ ಆಲೋಚನೆ ತಮ್ಮ ಸರ್ಕಾರಕ್ಕಿದೆ ಎಂದೂ ಸಹ ನಾಯನಾರ್ ನುಡಿದರು,

ಕೂಲಿಗಾರರಿಗೆ ೧೦೦ಕೋಟಿ ಕೊಡಿ

ಕೈಗಾರಿಕೆಗಳಿಗೆ ಬೆಂಬಲ ಎನ್ನುವ ನೆಪದಲ್ಲಿ ಟಾಟಾ-ಬಿರ್ಲಾಗಳಂತಹ ಕೋಟ್ಯಾಧಿಪತಿಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡುವ ಕೇಂದ್ರಸರ್ಕಾರ ಕನಿಷ್ಠ ನೂರು ಕೋಟಿ ರೂ.ಗಳನ್ನಾದರೂ ತಮ್ಮ ರಾಜ್ಯದ ಕೃಷಿಕೂಲಿಗಾರರ ನಿವೃತ್ತಿವೇತನ ಯೋಜನೆಗೆ ಕೊಡಬೇಕೆಂದು ನಾಯನಾರ್ ಅವರು ಕೇಂದ್ರ ಯೋಜನಾ ಆಯೋಗದ ಮುಂದೆ ಇಟ್ಟಾಗ-ಇವರಿಗೆ ಸಿಕ್ಕ ಉತ್ತರ 60 ವರ್ಷ ವಯಸ್ಸಾದವರು ಏನು ಉತ್ಪಾದಿಸುತ್ತಾರೆ? ಅವರಿಗೆ ಕೊಡಲು ಸಾಧ್ಯವಿಲ್ಲ."

ರಚನಾತ್ಮಕ ಚಳುವಳಿಗೆ ಸರ್ಕಾರಿ ಬೆಂಬಲ!

ಕೇಂದ್ರ ಸರ್ಕಾರ ತಂದಿರುವ ಜನವಿರೋಧಿ ಕಾನೂನುಗಳಾದ ವೀಸಾ, ನಾಸ ಮುಂತಾದುವುಗಳ ವಿರುದ್ಧ ಜನರು, ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ರಚನಾತ್ಮಕವಾಗಿ ಹೋರಾಡುವುದಾದರೆ ಅದಕ್ಕೆ ತಮ್ಮ ಸರ್ಕಾರವೇ ಬೆಂಬಲ ಕೊಟ್ಟಿದೆ ಮತ್ತು ಮುಂದೂ ಕೊಡುತ್ತದೆ ಎಂದು ಸಿ.ಪಿ.ಐ.(ಎಂ) ನಾಯಕ ನಾಯನಾರ್ ಘೋಷಿಸಿದರು.

ಕೇರಳಕ್ಕೆ ಬರಬೇಡಿ ಸುಳ್ಳು ಹೇಳಬೇಡಿ

ಕೇರಳದ ತೆಂಗು ಅಭಿವೃದ್ಧಿ ಮಂಡಳಿಗೆ 8 ಕೋಟಿ ರೂಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ ಎಂದು ಕೇಂದ್ರ ಮಂತ್ರಿ ಸ್ಟೀಫನ್ ಹೇಳಿದರು. ಆದರೆ ಇದುವರೆಗೆ ಒಂದು ಪೈಸೆ ಬಂದಿಲ್ಲ ಎಂದ ನಾಯನಾರ್ ಅವರು ಕೇರಳಕ್ಕೆ ಬರಬೇಡಿ-ಬಂದರೂ ಸುಳ್ಳು ಹೇಳಬೇಡಿ ಎಂದು ಕೇಂದ್ರ ಮಂತ್ರಿ ಸ್ಟೀಫನ್‌ರನ್ನು ಎಚ್ಚರಿಸಿದರು. ಸುಳ್ಳುಗಳನ್ನು ದಿಲ್ಲಿಯಲ್ಲಿ ಅಥವ ಕೇರಳದ ಹೊರಗಡೆ ಹೇಳಿಕೊಳ್ಳಿ ಎಂದು ಕಾಂ. ಇ.ಕೆ.ಎನ್. ನಗೆಯಾಡಿದರು.

ರಾಜ್ಯಗಳ ಯೋಜನೆ ಕಾರ್ಯಗತವಾಗಿರುವುದನ್ನು ವಿಮರ್ಶಿಸ ಹೊರಟಿರುವ ಕೇಂದ್ರ ಸರ್ಕಾರದ ಧೋರಣೆ ಸರ್ವಾಧಿಕಾರಿ ಧೋರಣೆ ಎಂದ ನಾಯನಾರ್ ಅವರು ಕೇಂದ್ರದ ಸರ್ವಾಧಿಕಾರಿ ಧೋರಣೆ ವಿರುದ್ಧ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹೋರಾಡಬೇಕೆಂದು ಕರೆನಿಡಿದರು.

ಜನತೆಯ ಇಷ್ಟಾನಿಷ್ಟದ ಮೇಲೆ ಸರ್ಕಾರಗಳು ನಿಲ್ಲುತ್ತವೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಸರ್ಕಾರಗಳನ್ನು ನಾವು ಇಷ್ಟಪಡುವುದಿಲ್ಲ. ಒಂದನ್ನು ಹಿಂದೂಮಹಾಸಾಗರಕ್ಕೂ, ಎರಡನ್ನು ಬಂಗಾಳ ಕೊಲ್ಲಿಗೂ ಎಸೆಯುತ್ತೇವೆ ಎಂದು ಕೇಂದ್ರ ಮಂತ್ರಿಗಳಾದ ಸ್ಟೀಫನ್ ಹಾಗೂ ಚೌಧರಿ ಅವರು ಹೇಳಿದರು. ಆದರೆ ಬಂಗಾಳ, ತ್ರಿಪುರ ಸರ್ಕಾರಗಳು ನಾಲ್ಕು ವರ್ಷ ಮುಗಿಸಿ ಐದನೇ ವರ್ಷಕ್ಕೆ ಕಾಲಿಟ್ಟಿವೆ. ಕೇರಳ ಸರ್ಕಾರ ಒಂದು ವರ್ಷ ಮುಗಿಸಿ ಎರಡನೇ ವರ್ಷಕ್ಕೆ ಕಾಲಿಟ್ಟಿದೆಯಲ್ಲ ಎಂದು ಪತ್ರಿಕಾ ವರದಿಗಾರರ ಗಮನ ಸೆಳೆದರು ನಾಯನಾರ್.

ಒಬ್ಬರ ಮರ್ಜಿ ಅಥವಾ ಕರುಣೆಯಿಂದ ನಮ್ಮ ಸರ್ಕಾರಗಳು ಆಗಿಲ್ಲ ಮತ್ತು ಹೋಗುವುದೂ ಇಲ್ಲ. ಕೇರಳ-ಬಂಗಾಳ-ತ್ರಿಪುರಾದ ಮಹಾಜನತೆ ನಮಗೆಮನ್ನಣೆಕೊಟ್ಟಿದ್ದಾರೆ. ಅವರಿಷ್ಟಪಡುವವರೆಗೆ ನಾವು ಸರ್ಕಾರದಲ್ಲಿರುತ್ತೇವೆ. ಆದ್ದರಿಂದ 5 ವರ್ಷಗಳ ಕಾಲ ತಾಳ್ಮೆಯಿಂದ ವಿರೋಧ ಪಕ್ಷದಲ್ಲಿ ಕುಳಿತಿರಬೇಕೆಂದು ಕಾಂ. ನಾಯನಾರ್ ಅವರು ಕಾಂಗ್ರೆಸ್ ನಾಯಕಮಣಿಗಳಿಗೆ ಬುದ್ಧಿವಾದ ಹೇಳಿದರು.

ಎಡೆಬಿಡದ ಕಾರ್ಯಕ್ರಮ

ಸಿ. ಪಿ. ಐ. (ಎಂ)ನ ಬೆಂಗಳೂರು ಜಿಲ್ಲಾ ಸಮಿತಿ, ತುಮಕೂರು ಜಿಲ್ಲಾ ಸಮಿತಿ ಮತ್ತು ಮೈಸೂರು ಜಿಲ್ಲಾ ಸಮಿತಿ ಹಾಗೂ ಶ್ರೀ ಗುರುನಾರಾಯಣ ಸಮಿತಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸಿ. ಐ. ಟಿ. ಯು. ಯಶವಂತಪುರ ಶಾಖೆ, ಕೇರಳ ಸಮಾಜ ಮುಂತಾದ ಸಂಘ ಸಂಸ್ಥೆಗಳು ಏರ್ಪಡಿಸಿದ್ದ ಹಲವಾರು ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದೆ ಪಾಲ್ಗೊಂಡಿದ್ದ ಕಾಂ. ನಾಯನಾರ್ ಅವರು ಸೆ. 15ರಂದು ತಮ್ಮ ಸ್ವಂತ ರಾಜ್ಯಕ್ಕೆ ಮರಳಿದರು. ಸೆ. 14ರಂದು ಬೆಳಿಗ್ಗೆ ತುಮಕೂರಿನಲ್ಲಿ, ಅಂದೇ ಸಂಜೆ ಬೆಂಗಳೂರಿನಲ್ಲಿ ಮತ್ತು ಸೆ. 15ರಂದು ಮೈಸೂರು ನಗರಗಳಲ್ಲಿ ನಡೆದ ಸಾರ್ವಜನಿಕ ಸಭೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಜನ ನೆರೆದಿದ್ದರು. ●

ಚಂದಾ ವಿವರ

ಬಿಡಿ ಪ್ರತಿ	:	60ಪೈಸೆ
6 ತಿಂಗಳಿಗೆ	:	15ರೂ.
ವಾರ್ಷಿಕ ಚಂದಾ	:	30ರೂ.

ಸಂಪಾದಕೀಯ

(1ನೇ ಪುಟದಿಂದ)

ಆದರೆ ಕಾಂಗ್ರೆಸ್ ಆಡಳಿತದಲ್ಲಿರುವ ದೇಶದ ಬಹುಭಾಗದಲ್ಲಿ ಕಡ್ಡಾಯ ಪಡಿತರ ಪದ್ಧತಿ ಇಲ್ಲ. ಸಾಕಷ್ಟು ಪಡಿತರ ಅಂಗಡಿಗಳಿಲ್ಲ. ಪಡಿತರ ಅಂಗಡಿಗಳಿದ್ದರೆ ರೇಷನ್ ಸಪ್ಲೈಯೇ ಇಲ್ಲ. ಪಡಿತರ ಅಂಗಡಿಗಳ ಎದುರು ಕಿಲೋಮೀಟರು ಉದ್ದಕ್ಕೆ ಜನ ಕಾದು ನಿಂತು, ಸಂಜೆ ಖಾಲಿ ಡಬ್ಬ, ಬರಿಗೈಯಲ್ಲಿ ಹೋಗುವುದು ಬೆಂಗಳೂರಿನಂತಲ್ಲಿ ದಿನನಿತ್ಯದ ಚಿತ್ರ. ಪಡಿತರ ಅಂಗಡಿಗಳಿಗೆ ಒದಗಿಸಿದ ವಸ್ತುಗಳೂ ಗುಪ್ತವಾಗಿ ಬಹಿರಂಗ ಮಾರುಕಟ್ಟೆಗೇ ಹೋಗುವುದು ಎಲ್ಲರಿಗೂ ತಿಳಿದಿರುವ ವಿಚಾರ. ಹೀಗಿದ್ದರೂ ಸರಕಾರವು ಈ ವಿಚಾರದಲ್ಲಿ ಉದಾಸೀನ ಮನೋಭಾವನೆಯನ್ನು ತೋರಿಸುತ್ತಿದೆ. ಜನಸಂಘಟನೆಗಳೂ, ವಿರೋಧ ಪಕ್ಷಗಳೂ ಮುಂದೆ ಬಂದು ಸಂಯುಕ್ತ ಚಳುವಳಿಗಳನ್ನು ನಡೆಸಿಯಾದರೂ ಸರಕಾರವು ನಮ್ಮ ರಾಜ್ಯದಲ್ಲೂ ಕೇರಳ ರಾಜ್ಯದ ಮಾದರಿಯನ್ನು ಅನುಸರಿಸುವಂತೆ ಮಾಡಲು ಒತ್ತಾಯಿಸಬೇಕಾಗಿದೆ.

ದೆಹಲಿಯಲ್ಲಿ ಯುವಜನತೆಯ ಬೃಹತ್ ಮೆರವಣಿಗೆ

(1ನೇ ಪುಟದಿಂದ)

ನೇತೃತ್ವದಲ್ಲಿ ಮುನ್ನಡೆದ ಬೃಹತ್ ರ್‍ಯಾಲಿ ಲೋಕಸಭೆಯ ಮುಂದೆ ಕೆಂಪು ಬಾವುಟಗಳ ಒಂದು ಸಮುದ್ರವನ್ನೇ ಸೃಷ್ಟಿಸಿತು.

ಹನನ್‌ಮುಲ್ಲಾ (ಎಂ.ಪಿ.), ಸೈಫುದ್ದೀನ್ ಚೌಧರಿ (ಎಂ. ಪಿ.)ಗಳ ನೇತೃತ್ವದಲ್ಲಿ ಒಂದು ಪ್ರತಿನಿಧಿಗಳ ನಿಯೋಗ ಪ್ರಧಾನಮಂತ್ರಿ ಇಂದಿರಾ ಗಾಂಧಿಯನ್ನು ಭೇಟಿಮಾಡಿ ಸಹಿ ಮತ್ತು ಬೇಡಿಕೆಗಳನ್ನು ಅರ್ಪಿಸಿದರು. ನಂತರ ನಡೆದ ರ್‍ಯಾಲಿಯನ್ನುದ್ದೇಶಿಸಿ ಸುನೀತ್ ಚೋಪ್ರ (ಡಿ. ವೈ. ಎಫ್. ಐ.) ನೇಪಾಲ್ ಭಟ್ಟಾಚಾರ್ಯ (ಎಸ್. ಎಫ್. ಐ.) ಅಶ್ವನಿರಾಯ್ (ರೆವಲ್ಯೂಷನರಿ ಯೂತ್ ಆರ್ಗನೈಸೇಷನ್) ಸುರೇಶ್ ಕಲ್‌ಮಾಡಿ(ಯೂತ್ ಕಾಂಗ್ರೆಸ್-ಎಸ್) ಹರಿಶಂಕರ್ (ಎನ್. ಎಸ್.ಯು.ಐ.-ಎಸ್.) ಮುಂತಾದವರು ಭಾಷಣ ಮಾಡಿದರು.

ಸುನೀತ್‌ಚೋಪ್ರ ಮಾತನಾಡುತ್ತಾ ಅಸ್ಸಾಮಿನ, ಗುಜರಾತಿನ ಚಳುವಳಿ ನಡೆಸುವವರ ಜೊತೆ ಮಾತ್ರ ಚರ್ಚೆ ನಡೆಸುತ್ತಿದ್ದ ಆಡಳಿತವರ್ಗದ ನಾಯಕರು ಪ್ರಪ್ರಥಮವಾಗಿ ಯುವಜನತೆಯ ಹಾಗೂ ವಿದ್ಯಾರ್ಥಿಗಳ ಸಮಸ್ಯೆ ಏನೆಂಬುದನ್ನು ಕೇಳಲಿದ್ದಾರೆಂದರು. ಸಂವಿಧಾನದಲ್ಲಿ ಕೆಲಸ ಮಾಡುವ ಹಕ್ಕನ್ನು ಮೂಲಭೂತಹಕ್ಕಾಗಿ ಸೇರಿಸಬೇಕೆಂದು ಭಾರತದ ಯುವಜನತೆ ಒಂದೇ ಸ್ವರದಿಂದ ಘೋಷಿಸುತ್ತಿರುವಾಗ ಲೋಕಸಭೆಯೊಳಗೆ ಪ್ರಜಾಪ್ರಭುತ್ವ ಹಕ್ಕನ್ನು ದಮನ ಮಾಡುವ ಅಗತ್ಯಸೇವೆ ಎಂಬ ಹೆಸರಿನ ಕರಾಳ ಶಾಸನವನ್ನು ಜಾರಿಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅದನ್ನು ಲೋಕಸಭೆಯಲ್ಲಿ ಜಾರಿ ಮಾಡಿದರೂ ಭಾರತದ ದುಡಿಯುವ ಜನತೆ ಅದನ್ನು ಸೋಲಿಸುವರೆಂದರು.

ಈ ಮೆರವಣಿಗೆ ವಿದ್ಯಾರ್ಥಿ-ಯುವಜನತೆಯ ಒಗ್ಗಟ್ಟಿನ ಆರಂಭ. ಇದನ್ನು ಮುಂದುವರಿಸಿ ಬಲಪಡಿಸಬೇಕೆಂದು ಎಸ್. ಎಫ್. ಐ. ಕಾರ್ಯದರ್ಶಿ ನೇಪಾಲ್ ಭಟ್ಟಾಚಾರ್ಯ ಹೇಳಿದರು.

ಯುವಜನತೆಯ ಸಮಸ್ಯೆಗಳ ಬಗ್ಗೆ ಒಕ್ಕೂಟವಾಗಿ ಒಂದು ರಾಷ್ಟ್ರೀಯ ಚಳುವಳಿಗೆ ರೂಪಕೊಡಲು 17 ರಾಜ್ಯ ವಿವಿಧ ಸಂಘಗಳ ಪ್ರತಿನಿಧಿಗಳು ಸೇರಲಿದ್ದಾರೆಂದು ಸುರೇಶ್ ಕಲ್‌ಮಾಡಿ ನುಡಿದರು.

ಸ್ವಾತಂತ್ರ್ಯಗಳಿಸಿ 34 ವರ್ಷಗಳಾದರೂ ಉದ್ಯೋಗಬೇಕು, ವಿದ್ಯಾಭ್ಯಾಸಬೇಕು ಎಂದು ಕೇಳಬೇಕಾಗಿ ಬಂದದ್ದು ನಾಚಿಕೆಪಡಬೇಕಾದ ವಿಷಯವೆಂದು ಅಶ್ವನಿರಾಯ್ ನುಡಿದರು.

ಸ್ವಾತಂತ್ರ್ಯಪೂರ್ವವಿದ್ದ ಪದ್ಧತಿಯನ್ನೇ ಮುಂದುವರಿಸುವುದರಲ್ಲಿ ಬದಲಾವಣೆ ಮಾಡದೆ ವಿದ್ಯಾರ್ಥಿ ಯುವಜನತೆಯ ಸಮಸ್ಯೆ ಬಗೆಹರಿಸಲು ಸಾಧ್ಯವಾಗುವುದಿಲ್ಲವೆಂದು ಅನ್ವರ್‌ಸಿಂಗ್ (ಯೂತ್ ಫಾರ್ ಡೆಮಾಕ್ರಸಿ) ವ್ಯಕ್ತಪಡಿಸಿದರು.

1981 ಸೆಪ್ಟೆಂಬರ್15-ಸ್ವತಂತ್ರ ಭಾರತದ ಇತಿಹಾಸದಲ್ಲಿ ಅತ್ಯಂತ ದೊಡ್ಡ ವಿದ್ಯಾರ್ಥಿ-ಯುವಜನರ ಮೆರವಣಿಗೆಗೆ ದೆಹಲಿ ಸಾಕ್ಷ್ಯವಾಗಿತ್ತು. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT